ಕೊರವಂಜಿ



Koravanji

ಅಕ್ಟೋಬರ್

೧೯೫೦

★

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ರೂಪು

ಶ್ರೀ|| ಹಾ. ರಾ.

ಶ್ರೀ|| ಶಿವರಾಮ ಕಾರಂತ

ಶ್ರೀ|| ರಾಮಿ

ಶ್ರೀ|| ಕೆ. ಎನ್. ಕಿಟ್ಟನ್

ಶ್ರೀ|| ಅ. ರಾ. ಸೇ.

ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಬಿಡಿಪ್ರತಿ
ಕಾಲುನಾಣ್ಯ


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY

ಕೊರವಂಜಿ

A. ANANTHIAH.

ಸಂಪುಟ ೨೩ ಅಕ್ಟೋಬರ್ ೧೯೬೦ ಸಂಚಿಕೆ ೭

ಬಹಿರಂಗ ಪತ್ರ

ಪ್ರಿಯ ಮಿತ್ರ ಮನ್ನಾಡೇ,

ಬಹುದಿನದಿಂದಲೂ ನಿನಗೊಂದು ಪತ್ರ ಬರೆಯಬೇಕೆಂದು ನನಗೆ ಆಶೆ. ಆದರೆ ಯಾವ ಪತ್ರಿಕೆಗಳಲ್ಲೂ, ಯಾರೂ ನಿನ್ನ ವಿಳಾಸವನ್ನು ಪ್ರಕಟಿಸಿಲ್ಲ. ನಿನ್ನ ವಿಳಾಸ ತಿಳಿಯದಿದ್ದುದರಿಂದಲೇ ಈ ಬಹಿರಂಗ ಪತ್ರ.

ಬೊಂಬಾಯಿಗೆ ಸೈಗಲ್ ಬಂದಮೇಲೆ ಅವನು ಯಾವ ಲೋಕೋತ್ತರ ಗೀತೆಯನ್ನೂ ಹಾಡಲಿಲ್ಲ. ನೀನಾದರೋ ಅನೇಕ ಅಂಥ ಗೀತೆಗಳನ್ನು ನೀಡಿದೆ. ಆದುದರಿಂದಲೇ ನಾನು ಪ್ರಸಿದ್ಧಿಯನ್ನು ಬಯಸದೆ ಸುಮ್ಮನಾದೆ. 'ಚಲೇ, ರಾಧೇರಾನೀ' ಎಂಬ ಗೀತೆಯನ್ನು ನೀನು ನುಡಿದಾಗ ನನಗೆ 'ಅಖಿಯೋಂಮೇ ಪಾನೀ' ಬರುತ್ತಿತ್ತು. 'ಏ ಕಹಾನೀ ಹೈ ದಿಯೇಕಿ ಔರ್ ತುಫಾನಕೀ' ಹೇಳಿದ್ದನ್ನು ಕೇಳಿದ ನಾನು ಬಲವಾನನಾದ ನಿನ್ನ ಜೊತೆಗೆ ನಿರಬಲನಾದ ನನ್ನ ಲಡಾಯಿ ಬೇಡವೆಂದು ಸುಮ್ಮನಾಗಿದ್ದೆ.

ಈಚೆಗೇಕೆ ನೀನು ಸುಮ್ಮನಾಗಿರುವೆ? 'ಓ ಜಮುನಾಕಿನಾರೆ'ಯಾದ ಮೇಲೆ ನೀನೇಕೆ ಅಷ್ಟು ಒಳ್ಳೆಯ ಹಾಡುಗಳನ್ನು ಹೇಳಿಲ್ಲ? 'ಯಾಲ ಯಾಲ ದಿಲ್ ಲೇಗಯೀ' ಎಂಬ ಹಾಡನ್ನು ಕೇಳಿ 'ಯಾ ಅಲ್ಲಾ, ಇದು ಮನ್ನಾಡೇ ಇರಬೇಕು. ಇನ್ನಾರಿಗೂ ಇದು ಸಾಧ್ಯವಿಲ್ಲ' ಎಂದುಕೊಂಡೆ. ಈಗಲಾದರೋ

ಯಾವುವೋ ಡ್ಯೂಯೆಟ್‌ಗಳನ್ನು ಹೇಳುವುದರಲ್ಲೇ ತೃಪ್ತನಾಗಿರುವೆ. ಯಾರ ತಪ್ಪು? ಸಂಗೀತ ನಿರ್ದೇಶಕರದೋ, ನಿನ್ನದೊ, ನಮ್ಮದೋ?

ಯಥಾಪ್ರಕಾರ ಈಗಲೂ ಸಂಗೀತದ ಒಂದು ಪರ್ವಕಾಲ. ಸಂಗೀತಾಸಕ್ತಿ ಸ್ವಭಾವ ಸಹಜವಾದುದರಿಂದ, ನಾವೆಲ್ಲರೂ (ಎಂದರೆ ನಾನೂ) ಮನುಷ್ಯನಾದುದರಿಂದ, ಫಿಲ್ಮೀಗಾನವನ್ನು ಕೇಳಲು ಬೇರೊಬ್ಬರ ಮನೆಯ ರೇಡಿಯೋ ಮುಂದೆ ಹೋಗಿ ಕುಳಿತುಕೊಳ್ಳಲೇ ಬೇಕಾಗುತ್ತದೆ. ಅಲ್ಲಿ ಷುರುವೇ, ರೇಡಿಯೋರಾದ್ಧಾಂತ. ಅಂದ ಹಾಗೆ ಈ ಗಾಯಕಿಯರೆಲ್ಲರಿಗೂ, ಗಾಯಕರಿಗೂ ಏಕೆ ಹೀಗಾಗಿದೆ. ಅದೇಕೆ ಆ ಕಿರಿಚಲು, ಅದೇಕೆ ಆ ಅಪಸ್ವರ. ಸಂಗೀತ ರಚನೆ ಬೇಡ, ಶೃತಿಗೂ ಲೀನವಾಗುವುದಿಲ್ಲವಲ್ಲ ಇವರ ಗಂಟಲುಗಳು. ಇವರ ಮೇಲೆ ಯಾವ ನಿಯಂತ್ರಣವೂ ಇಲ್ಲವೇ? ಬೆಳಿಗ್ಗೆ ಎದ್ದು ಮುಖ ತೊಳೆದು 'ಸ್ವಾಮಿದೇವನೆ ಲೋಕಪಾಲನೆ' ಹೇಳುವುದು ಬಿಟ್ಟು 'ಮೊಹೋಬತ್' ಎಂಬುದಕ್ಕೆ ಬಚನಾ ಹೈ ಮುಷ್ಕಿಲ್ ಎಂದು ಪ್ರಾಸ ಸೇರಿಸಿ ಯಾಕೆ ಒದರುತ್ತಾರೆ. ಮನೆ ಮಠ ನೋಡಿಕೊಳ್ಳುವುದು ಬೇಡವೇ.

ಹತ್ತು ಗಂಟೆಗೆ ಪ್ಯಾರ್, ಹನ್ನೆರಡು ಗಂಟೆಗೆ ಇಷ್ಕ್, ಮೂರು ಗಂಟೆಗೆ ಉಲ್ಫತ್, ಆರಕ್ಕೆ ಮತ್ತೆ ಮೊಹಬತ್. ಅದೇ ಶೃತಿಗೆ ಲೀನವಾಗದ ಕಂಠ, ಅದೇ ಕಿರಿಚಲು. ಅದನ್ನು ಕೇಳುವುದೇ ನಮ್ಮ ಹಣೇಬರಹ. ಇತ್ತೀಚಿನ ಪ್ಯಾಷನ್‌ಗಳು ಗೊತ್ತಿವೆಯೇ? ಏಕ್‌ದಂ, ಲಬಲಬ ಬಡಿದುಕೊಳ್ಳುವುದು ಆಮೇಲೆ ಒದರಾಟ, ಕೊಟ್ಯಾಂತರ ಜನರಿಗೆ ಇದು ಪ್ರಿಯವಾಗಿರುವುದರಿಂದಲೇ, ಈ ಲೋಕದ ಗತಿ ಹೀಗಾಗಿರಬೇಕು. ಅಲ್ಲವೇ?

ಈ ಹಿಂಸೆಯನ್ನನುಭವಿಸಿ ತಾಳಲಾರದೇ ಮನೆ ಬಿಟ್ಟು ಹೋಟಲಿಗೆ ಹೋದರೂ ಅದೇಗತಿ. ಹೃದಯವನ್ನು ಶೀಷೆಯಲ್ಲಿ ಇಟ್ಟುಕೊಂಡು ಉದ್ಧಾರವಾಗೋಣವೆಂದು ಮೊನ್ನೆ ಹೋಗುತ್ತಿದ್ದೆ. ಹಾಗೂ ಬಿಡಲಿಲ್ಲ ಈ ಗಾಯಕಿಯರು. 'ಏ ಕಭೀ ಟೂಟ ಜಾಯೆಗಾ' ಎಂದು ಒದರಿ ಹೆದರಿಸಿದರು. ಓಡಿ ಹೋಗಿ ಕಾಡು ಸೇರಿದೆ, ಮತ್ತೆ ಬಂದೆ ಎನ್ನು. ಮನುಷ್ಯ ಸಂಘಜೀವಿ.

ಇದಕ್ಕೆಲ್ಲಾ ಪರ್ಯವಸಾನವೇನು? ಸ್ವಾತಂತ್ರ್ಯೋತ್ತರದಲ್ಲಿ ಫಿಲ್ಮೀಗೀತೆಗಳು! ಇದನ್ನು ನೆನೆಸಿಕೊಂಡರೆ ಬಹು ಹಿಂದೆ ರೂಪಾಯಿಗೆ ನಲವತ್ತೆಂಟು ಸೇರು ಅಕ್ಕಿಯಿತ್ತಲ್ಲ, ಆಗಲೇ ಉತ್ತಮ ಎನ್ನಿಸುತ್ತದೆ. ಆಗ ಇದ್ದುದು ಬರೀ ದಾಸಯ್ಯ. 'ಬೇಡವೋ, ಅದಲ್ಲ!' ಎಂದರೆ ಅವನಷ್ಟಕ್ಕೆ ಅವನು ಊರ ಹೊರಗಿನ ಗುಡಿ ಹಿಂದೆ ತಂಬೂರಿಯನ್ನು ಒಂದೇ ಬಾರಿ 'ಟಿಂಗ್' ಎನ್ನಿಸಿ ಸುಮ್ಮನಾಗುತ್ತಿದ್ದ.

ನನ್ನ ಹಾಳುರಗಳೆ ಸಾಕು ಮನ್ನಾಡೇ, ನೀನೀಗ ಏನು ಮಾಡುತ್ತಿರುವೆ? ರೇಡಿಯೋಗಳಲ್ಲಿ ನೀನು ಸ್ವಂತ ಕೃತಿಗಳನ್ನು ಹಾಡಲಾರಂಭಿಸುವೆಯೋ ಇಲ್ಲವೋ?

ಲೋಕದ ಮೇಲೆ ಒಳ್ಳೆಯ ಸಂಗೀತ ನಿರ್ದೇಶಕರಿಲ್ಲದೆ ಇಲ್ಲ. ಅವರೆಲ್ಲಾ ವನವಾಸ, ಅಜ್ಞಾತ ವಾಸಕ್ಕೆ ಹೋಗಿಲ್ಲ. ಇದ್ದಾರೆ ಅಲ್ಲಿ ಇಲ್ಲಿ. ಅವರನ್ನಾದರೂ ಹಿಡಿ ಇಲ್ಲವೇ ನೀನೇ ನಿರ್ದೇಶಕನಾಗು.

ನನ್ನ ಅದರ್ಶವನ್ನು ಸ್ವಲ್ಪ ಅಭ್ಯಸಿಸು. ಇತ್ತೀಚೆಗೆ ನಮ್ಮ ಅಕ್ಕಪಕ್ಕದ ಮನೆಗಳಲ್ಲಿ, ಗಮಕಾಭ್ಯಾಸ, ಪಿಟೀಲು, ವೀಣೆ ಹಾರ್ಮೋನಿಯಂ ಮೊದಲಾದವುಗಳ ಹಿಂಸೆ ಆರಂಭವಾದುದರಿಂದ, ನಾನೂ ಫಿಲ್ಮೀ ಸಂಗೀತ (ಎಂದರೆ ಒದರಾಣಿಕೆ) ಆರಂಭಿಸಿದ್ದೇನೆ. ಆದರೆ ನಿನ್ನ ಗೀತೆಗಳನ್ನಲ್ಲ. ಬೇರೆಯ ಕೃತಿಗಳನ್ನು ನನ್ನ ಗಂಟಲು ನಂಬಿದರೆ ನಂಬು, ಬಿಟ್ಟರೆ ಬಿಡು, ಭಾರೀ ಇಂಪ್ರೂವ್ ಆಗಿದೆ. ನನ್ನ ಕೀರ್ತಿ ಹಬ್ಬುತ್ತಿದೆ. ನಮ್ಮ ಮನೆ ಹಿಂದಿನ ಬೀದಿಯಲ್ಲಿ ಮೊನ್ನೆ ಒಬ್ಬನು ಶೀಷೆಯಲ್ಲಿ ಕಲ್ಲುಗಳನ್ನು ತುಂಬುತ್ತಿದ್ದ. ಅವನು ಬೊಂಬಾಯಿಯ ಟ್ಯಾಲೆಂಟ್ ಸ್ಕೌಟ್ ಎಂದು ನನ್ನ ಅನುಮಾನ. ಹದಿಮೂರು ವರ್ಷದ ಹುಡುಗರೆಲ್ಲಾ ಮ್ಯೂಸಿಕ್ ಡೈರೆಕ್ಟರುಗಳಾಗುತ್ತಿರುವಾಗ ನಾನೇಕೆ ಹಿನ್ನೆಲೆ ಗಾಯಕನಾಗಬಾರದು? ಮೊನ್ನೆ 'ಚೌಧವೀಕ ಬಾಂದ್' ಹೇಳುತ್ತಿದ್ದೆ ನೋಡು. ಹದಿಮೂರು ಸೆಕೆಂಡುಗಳಲ್ಲೇ ನಮ್ಮ ಬೀದಿಯಲ್ಲಿ ದೊಡ್ಡ ದೊಂಬಿ ಎದ್ದಿತು. ಅದನ್ನೇ ರೆಕಾರ್ಡು ಮಾಡಿಕೊಂಡಿದ್ದರೆ ಬೊಂಬಾಯಿಯ ಉದಯೋನ್ಮುಖ ನಿರ್ದೇಶಕರ ಅದೃಷ್ಟ ಖುಲಾಯಿಸಿ ಹೋಗುತ್ತಿತ್ತು. ಇದೀಗ ಪ್ರಿಯ ಬಂಧೂ, ಬೊಗಳುತ್ತಾ ಬೊಗಳುತ್ತಾ ರಾಗವಲ್ಲ **ಬೊಗಳುವುದೇ ರಾಗ!** ಆದುದರಿಂದ ನಾನು ಪ್ರಸಿದ್ಧಿಗೆ ಬರುವಂತಹ ಅಪಘಾತ ತಪ್ಪಿಸು.

ಇಂತಹ ಪರ್ವಕಾಲದಲ್ಲಿ ಪ್ರಥಮ ಪಂಕ್ತಿಯ ನಾಯಕನೂ, ಗಾಯಕನೂ ಆಗುವುದೆರಡೂ ಅಭಿಮಾನಾಸ್ಪದ ವಿಷಯವಲ್ಲ. ಎರಡು ವರ್ಷ ಸಮಯ ಕೊಡು. ನಾನೇ ಪ್ರಥಮ ಪಂಕ್ತಿಗೆ ಬರುತ್ತೇನೆ. ಆದರೆ ಒಂದೇ ವಿಷಯ—ಇಂತಹವರೆಲ್ಲರಿಗೂ ಛಾನ್ಸ್ ಕೊಟ್ಟು ನಿನ್ನಂತವರೇಕೆ ಹಿಂದುಳಿಯಬೇಕು. ಬುದ್ಧಿಯಿದ್ದವರು, ಪ್ರಸಾದಿಕ ಶಾರೀರವಿರುವವರು ಏಕೆ ಮೂಲೆ ಗುಂಪಾಗಬೇಕು? ಸ್ವಲ್ಪ ವಿಚಾರ ಮಾಡಿ ಉತ್ತರ ಬರೆ, ಮನ್ನಾಡೇ.

ನಿನ್ನ ಉತ್ತರಬರುವವರೆಗೂ, ಇದೋ, ಬೇರೆಯವರ ರೇಡಿಯೋ ಆಫ್‌ಮಾಡಿ ನನ್ನ ಮನೆಗೆ ಹೋಗುತ್ತೇನೆ.

ಇಂತು ನಿನ್ನ,

ಅ ಭಿ ಮಾ ನಿ.

ಕಸ್ತೂರೀ—ಕೇಸರೀ

ಬರೆದವರು : "ಡೂನು"

ಸೈನ್ಯದ ಇಲಾಕೆಗೆ ಸೇರಿಕೊಂಡು ಕಾಶ್ಮೀರಕ್ಕೆ ಹೋಗಿ ಮೂರು ವರ್ಷ ಅಲ್ಲಿದ್ದು ಕೆಂಪಗಾಗಿ ಬಂದಿದ್ದ ಕರೀಸುಬ್ಬು.

"ದಕ್ಷಿಣ ದೇಶದಲ್ಲಿರುವ ಕರಿಯರನ್ನೆಲ್ಲ ಉತ್ತರದೇಶಕ್ಕೆ ಕಳಿಸ್ಬೇಕೂಕಣೋ ; ಉತ್ತರದ ಬಿಳೀಜನಗಳನ್ನು ಕಣಿವೇಕೆಳಗೆ ದಕ್ಷಿಣಕ್ಕೆ ಅಟ್ಬೇಕು, ರಾವಣ ಸ್ವಾಮಿಗಳ ರಾಷ್ಟ್ರಕ್ಕೆ !" ಎಂದಬ್ಬರಿಸಿದ.

"ನಿನ್ನನ್ನು ನೋಡಿದರೆ ನೀನು ಹೇಳುವುದು ನಿಜ ಎಂತಕಾಣುತ್ತೆ. ಎಷ್ಟು ಕಪ್ಪಗಿದ್ದವನು ಹೇಗೆ ಕೆಂಪಗಾಗಿ ಬಂದಿದ್ದೀಯಲ್ಲೋ, ಕೆಂಗೋಶೀ ಹಾಗೆ" ಎಂದಂದ ಬಾಲ್ಯಸ್ನೇಹಿತ ಶಂಕರ್.

"ಕೆಂಗೋಶಿ ಆಗಿದ್ದರೇನು, ಹಿರಿಯರು ಇಟ್ಟ ಹೆಸರು 'ಕರೀಸುಬ್ಬು'. ನಮ್ಮಮ್ಮ ಕರೀಕಲ್ಲಿನ ಸುಬ್ಬರಾಯನಿಗೆ ಹರಕೆಹೊತ್ತಮೇಲೆ ನಾನು ಹುಟ್ಟಿದೆನಂತೆ ಕರೀನಾಗರನ ಹಾಗೆ! ಆದಕ್ಕೆ ನಮ್ಮಜ್ಜಿ ಮುದ್ದಿಗೆ ಕರೀಸುಬ್ಬು ಎಂತ ಹೆಸರಿಟ್ಟರಂತೆ"

"ಅದಕ್ಕೇನಂತೆ, ಇಂಗ್ಲಿಷಿನವರಲ್ಲಿ ಇರೋದಿಲ್ಲವೇ ಮಿಸ್ಟರ್ ಬ್ಲೀಚರ್ ವೈಟ್ ಎಂತ? ನೀಗ್ರೋಗಳಲ್ಲಿಲ್ಲವೇ ಮಿಸ್ಟರ್ ಟ್ರೂಮನ್ ಬ್ಲ್ಯಾಕ್ ಅಂತ? ನೀನೂ ಹಾಗೇ, ಕರೀಸುಬ್ಬೂ !....ಅದಿರಲಿ, ನೀನೇನು ಮದುವೆಗಿದುವೆ ಮಾಡಿ ಕೋತೀಯೋ ಇಲ್ಲವೋ ?"

"ಅದಕ್ಕೇ ಬಂದಿರೋದು ಬೆಂಗಳೂರಿಗೆ."

"ಅಲ್ವೋ, ನೀನೇ ಅಂದಿ, ಕಪ್ಪಗಿರೋರನ್ನ ಉತ್ತರಕ್ಕೆ ಕಳಿಸ್ಬೇಕು ಅಂತ. ಏನು ಒಬ್ಬ ಕಪ್ಪು ಹುಡುಗೀನ ಮದುವೇಮಾಡಿಕೊಂಡು ಕಾಶ್ಮೀರಕ್ಕೆ ಹೋಗ್ಬೇಕೂಂತಿದ್ದೀಯೇನು ?"

" ಬಿಳೀ ಹುಡುಗಿಯೇ ಯಾಕೆ ಸಿಕ್ಕಬಾರದು ನನಗೆ? ನೀನೇ ಅಂತೀ 'ಕೆಂಪಗಾಗಿ ಬಂದಿದ್ದೀಯಾ' ಅಂತ ಬೆಳ್ಳಗಿರೋ ಹುಡುಗೀನೇ ಯಾಕೆ ನನ್ನನ್ನ ಒಪ್ಪಿಕೋಬಾರದು ?"

" ಆಹಾ, ಒಪ್ಪಿಕೋಬಹುದು. ಯಾಕಾಗಬಾರದು?....ಅಂದರೆ ನಿನಗೆ, ಕಾಶ್ಮೀರದಿಂದ ಕನ್ಯಾಕುಮಾರೀಗೆ ವರ್ಗವಾಗಿಬಿಟ್ಟರೆ? ನೀನು ಯಥಾಪ್ರಕಾರ ಕರೀಸುಬ್ಬನಾಗುತ್ತೀಯೇ; ನಿನ್ನ ಹೆಂಡತಿ ಅವಳೂ ಕನ್ಯಾಕುಮಾರೀ ಬಿಸಲಿಗೆ ಕರೀಕಲ್ಲಿನ ಕನ್ಯಾಕುಮಾರಿ ವಿಗ್ರಹದಹಾಗೆ ಕಪ್ಪಗಾಗುತ್ತಾಳೆ!"

" ಹಾಸ್ಯಮಾಡಬೇಡ ಕಣೋ. ಹೇಗಿದ್ದರೂ ನಾನು ಉತ್ತರದಲ್ಲೇ ಇರಬೇಕು ಚೀನಾದೇಶ ಇರೋತನಕ. ಪಾಕಿಸ್ಥಾನ ಇರೋತನಕವಾದರೂ ನಾನು ಉತ್ತರದಲ್ಲೇ ಇರಬೇಕಾಗುತ್ತೆ. ಆದ್ದರಿಂದ ಕಪ್ಪು ಹುಡುಗಿಯಾದರೂ ಸರಿಯೇ, ಒಪ್ಪವಾಗಿದ್ದರೆ ಸಾಕು. ಅವಳೂ ನನ್ನ ಜೊತೆಯಲ್ಲಿ ಕೆಂಪಗೆ ಬೆಳ್ಳಗಾಗುತ್ತಾಳೆ, ಶ್ರೀನಗರದಲ್ಲೋ ಸಿಕ್ಕಿಂನಲ್ಲೋ, ಲಡಾಕ್‌ನಲ್ಲೋ....

" ನಿಮ್ಮಕಡೆಯುವರು ಯಾರಿದ್ದಾರೆ ಬೆಂಗಳೂರಲ್ಲಿ?"

" ಯಾರೂ ಇಲ್ಲ. ಅದಕ್ಕೇ ಅಲ್ಲವೇನೋ ನಾನು ಮಿಲಿಟರೀಗೆ ಸೇರಿ ಕೊಂಡದ್ದು! ಪೇಪರಿನಲ್ಲಿ ಅಡ್ವರ್‌ಟೈಸ್‌ಮಾಡಿ ಬೇಡಿಕೊಂಡರೇನೇ ಯಾರಾದರೂ ಹೆಣ್ಣುಕೊಟ್ಟಾರು. ಅದಕ್ಕೇ ನಿನ್ನ ಹತ್ತಿರ ಬಂದಿರೋದು, ಹಳೇ ಸ್ನೇಹಿತ ಅಂತ."

" ತಾಯಿನಾಡಿನ ಹೆಣ್ಣೇ ನಿನಗೆ ಬೇಕಾಗಿದ್ದರೆ 'ತಾಯಿನಾಡು' ಪೇಪರ್ ಇದ್ದೇ ಇದೆಯಲ್ಲ, ಹಾಕಿಸ್ಬಿಡೋಣ ಅದರಲ್ಲಿ. ನಿನ್ನ ಮಾತೃಭಾಷೆಯನ್ನೇ ಆಡುವ ಹೆಣ್ಣುಬೇಕಾಗಿದ್ದರೆ 'ಕನ್ನಡ ನುಡಿ' ಪೇಪರಿನಲ್ಲಿ ಹಾಕಿಸ್ಬಿಡೋಣ. ಜೊತೆಗೆ ರಾಷ್ಟ್ರಭಾಷೆಯೂ ಗೊತ್ತಿರಬೇಕೆಂದು ಬಯಸಿದರೆ 'ಜನವಾಣಿ'ಯಲ್ಲಿ ಹಾಕಿಸ್ಬಿಡೋಣ. ಹಿಂದೂ ಜಾತಿಯ ಹೆಣ್ಣುತಾನೇ ಬೇಕಾದ್ದು? 'ಹಿಂದೂ' ಪೇಪರಿಗೊಂದು ಕೊಟ್ಟುಬಿಡೋಣ."

" ಅದೇ ಅಂದುಕೊಂಡೆ, ನಿನ್ನನ್ನ ಕೇಳಿದರೆ ಸಲಹೆ ಕೊಟ್ಟೇಕೊಡುತ್ತೀ ಅಂತ. ಮತ್ತೆ ವಿಳಾಸಕ್ಕೆ? ಪೋಸ್ಟ್‌ಬಾಕ್ಸ್ ನಂಬರು ಕೊಡಬೇಕಲ್ಲ?"

" ಕೊಡೋಣ ಪೋಸ್ಟ್‌ಬಾಕ್ಸ್ ನಂಬರ್ XYZ 123 ಅಂತ. ಅದು ನನ್ನ ಆಫೀಸಿನ ಅಡ್ರೆಸ್‌ಗಿರಲಿ. ಮನೇ ಅಡ್ರೆಸ್ಸಿಗೆ ಬಂದರೆ ನನ್ನ ಹೆಂಡತಿ

ಏನಾದರೂ ನೋಡಿಬಿಟ್ಟರೆ ಗಾಬರಿ ಆದಾಳು! ‘ ಇದೇಕೆ ಹೆಣ್ಣಿನ ಚಪಲ ಹುಟ್ಟಿದೆ ಇವರಿಗೆ” ? ’ ಅಂತ.

“ ಅದರ ಒಕ್ಕಣೆ ? ”

“ ಬರೆಯೋಣ ಕೂತುಕೋ. ಕೊಂಚ ಯೋಚನೆ ಮಾಡುತೇನೆ. ನೀನು ಮದುವೆಯ ವರ. ನಿನ್ಕೈಲೇ ಬರೆಸೋದು ಚೆನ್ನಾಗಿಲ್ಲ. ನಾನೇ ಬರೆಯಬೇಕು ಅದನ್ನ. ”

“ ಬರಿ, ಸಾವಕಾಶವಾಗಿ. ನಾನು ಸಾಯಂಕಾಲ ಬಂದುನೋಡಲೇ ? ”

“ ಓಹೋಹೋ, ಅಷ್ಟೊಂದು ಬೇಗಲೇ ? ನಿನಗಿರುವ ರಜಾ ಎಷ್ಟು ದಿನ ? ”

“ ಹದಿನೇಳು ದಿನ. ”

“ ಅಷ್ಟರಲ್ಲಿ, ನಿನ್ನ ಅಡ್ವರ್‌ಟೈಸ್‌ಮೆಂಟು ಪ್ರಸಾರವಾಗಿ, ಹೆಣ್ಣುಗಳು ತಂಡೋಪತಂಡ ಬಂದು, ಅವರ ಪೈಕಿ ಚುನಾವಣೆ ಆಗಿ, ನಿಶ್ಚಿತಾರ್ಥ ಲಗ್ನ ಪತ್ರಿಕೆಗಳಾಗಿ, ಛತ್ರ, ಚಪ್ಪರ, ವಾಲಗಗಳೆಲ್ಲಗೊತ್ತಾಗಿ....ಏನು, ಮದುವೇ ಅಂದರೆ ಮಿಲಿಟರಿ ಆಪರೇಷನ್ ಎಂದುಕೊಂಡುಬಿಟ್ಟೆಯೋ ? ”

“ ಹದಿನೇಳಲ್ಲ, ಹನ್ನೆರಡೇದಿನ ಇಲ್ಲಿರೋದು. ಹದಿನೇಳರಹೊತ್ತಿಗೆ ಜಮ್ಮೂ ಆಚೆಗೆ ಮುಟ್ಟಿರಬೇಕು. ”

“ ಸರಿ ಕಣಯ್ಯ ! ಹೆಣ್ಣು ನಿಷ್ಕರ್ಷೆ ಆಗಿದ್ದರೇನೋ ಬನ್ನೇರುಘಟ್ಟದಲ್ಲೋ ವಸಂತಪುರದಲ್ಲೋ ಹೋಗಿ, ಗ್ರಾಮಫೋನ್ ಹಾಡಿಟ್ಟು, ಪಿಕ್‌ನಿಕ್ ಇದ್ದಹಾಗೆ ಮದುವೆಮಾಡಿಕೊಂಡು ಅರ್ಧಮುಕ್ಕಾಲುದಿನದಲ್ಲಿ ವಾಪಸು ಬಂದುಬಿಡಬಹುದು. ಹೆಣ್ಣಿಗೇನೇ ಅಡ್ವರ್‌ಟೈಸ್ ಮಾಡುವ ಸ್ಟೇಜಿನಲ್ಲಿರುವಾಗ ನೀನು....ಹನ್ನೆರಡು ದಿನದಲ್ಲಿ ಸಂಸಾರಸಮೇತ ಜಮ್ಮೂಗೆ ಹೊರಡುವ ಆಸಾಮಿ—ಲೋ ಕರೀಸುಬ್ಬೂ ಬೆಂಗಳೂರು ಈಗ ಹೇಗಿದೆ ಅನ್ನೋದನ್ನೇ ಮರೆತುಬಿಟ್ಟಿದ್ದೀ ಕಣೋ ! ಮದುವೆಗಳು ಅನ್ನೋದು ಈ ಊರಲ್ಲಿ ಈಗ ಬಹಳ ಸ್ಪೆಷಲೈಸ್ ಆಗಿಬಿಟ್ಟಿವೆ. ಮೊನ್ನೆ ವಿಶ್ವವೈಶ್ಯಪುರದಲ್ಲಾದ ಚಿನ್ನಯ್ಯಸೆಟ್ಟರ ಮಗಳ ಮದುವೇಲಿ........”

“ ಹಾಗಾದರೆ ಗಡಿಬಿಡೀಲಿ ಈ ಊರ್ಕಡೆ ಮದುವೆ ಮಾಡಿಕೊಳ್ಳೋ ಹಾಗಿಲ್ಲ ಅನ್ನು ? ”

“ ಅಷ್ಟೊಂದು ಗಡಿಬಿಡೀಲಿ ಸಾಧ್ಯವೇ ಇಲ್ಲ ! ”

" ಸರಿ, ಹೋಗಲಿ ಬಿಡು ಹಾಗಾದ್ರೆ."

" ಆಲ್ರೋ ಶಂಕರ್, ಬೆಂಗಳೂರಲ್ಲಿ ನೀನೊಬ್ಬನೇ ಸ್ನೇಹಿತ ನನಗಿರೋದು. ನಿನ್ನ ಒಪ್ಪಿಗೇನೂ ಇಲ್ಲದೆ ಯಾವುದೂ ಮಾಡಬಾರದು, ನಿಜ. ಆದರೆ........"

" ಏನು ' ಆದರೆ ' ? "

" ನಾನು ಅಷ್ಟು ದೂರದಲ್ಲಿರುವಾಗ ನೀನೆಲ್ಲೋ ನಾನೆಲ್ಲೋ. "

" ಛೆ, ಛೆ, ಹಾಗನ್ನಬಾರದು. "

" ಅದು ಬಲ್ಲೆ. ಅದಕ್ಕೇ ನಿನ್ನ ಒಪ್ಪಿಗೆ ನನಗೆ ಅಗತ್ಯ ಅಂತಲೇ ನಿನ್ನನ್ನು ಹುಡುಕಿಕೊಂಡು ಬಂದಿರೋದು. ನಿನ್ನ ಈಗಿನ ಅಡ್ರೆಸ್ ಗೊತ್ತಿರಲಿಲ್ಲ. ಆದ್ದರಿಂದ 'ಮಾಡರ್ನ್ ಹೋಟ್ಲ'ಲ್ಲಿಳಿದುಕೊಂಡು ನಿನ್ನ ವಿಳಾಸ ವಿಚಾರಿಸಿಕೊಂಡು ಬಂದೆ."

" ಬಹಳ ಒಳ್ಳೆಯದಾಯಿತು. ಎಲ್ಲೀ, ನೀನು ಮಾಯವಾಗಿಬಿಟ್ಟು ಐದಾರು ವರ್ಷ ಆಯಿತಲ್ವೇನೋ? ನನ್ನ ಮದುವೆ ಐದುವರ್ಷದ ಹಿಂದೆ ಆದಾಗ ನಿನಗೆ ಲಗ್ನಪತ್ರಿಕೆ ಹಾಕೋಕೂ ನಿನ್ನ ಅಡ್ರೆಸ್ ಗೊತ್ತಿರಲಿಲ್ಲ."

" ನಿನ್ನ ಹೆಂಡತಿ ಒಳ್ಳೇ ತಿಳಿವಳಿಕಸ್ಥರಾದವರು ಅಂದುಕೊಳ್ಳುತ್ತೀನೆ ? "

" ಅದೇಕೋ ಹಾಗೆ ಕೇಳುತ್ತೀ ? "

" ಅವರಿಗೆ ಅಪರಿಚಿತರನ್ನು ನೋಡಿದರೆ ಅಂಜಿಕೆ ಆಗುವುದಿಲ್ಲವಷ್ಟೆ ? "

" ಇದೇನೋ ಹೀಗೆ ಕೇಳುತ್ತೀ ಕರೀಸುಬ್ಬೂ ? "

" ಏನೂ ಇಲ್ಲ ; ಮಾಡರ್ನ್ ಹೋಟ್ಲಲ್ಲಿ ನಾವು ಇಬ್ಬರು ಇಳಿದು ಕೊಂಡಿದ್ದೇವೆ. "

" ಆತನೂ ಮಿಲಿಟರಿಯುಲ್ಲಿ ಕಾಶ್ಮೀರದಲ್ಲಿದ್ದವನೋ ? "

"ಉಹ್ಞೂ, ಅದು ' ಆತ ' ನೂ ಅಲ್ಲ, ' ಮಿಲಿಟರಿ'ಯೂ ಅಲ್ಲ , ಕಾಶ್ಮೀರ ಹಾದು ! "


" ಅಂದರೆ ? ಅರ್ಥವಾಗೋದಿಲ್ಲ ಕಣೋ ಕರೀಸುಬ್ಬೂ ? "

" ನನ್ನ ಹೆಂಡತೀ ಕಣೋ, ಅವಳು ಕಾಶ್ಮೀರದವಳು ! "

" ಏನಂದೀ ! ಕರೀಸುಬ್ಬಾಪ್ಪ ! ಕಾಶ್ಮೀರದವಳನ್ನ ಮದುವೆ ಆಗಿದ್ದೀಯೋನೋ ? "

" ಹೌದು ಕಣೋ ಹನಿಮೂನ್‌ಗೆ ಬೆಂಗಳೂರಿಗೆ ಬಂದಿದ್ದೇವೆ."

" ಲೇ ವಿಶಾಲೂ, ಇಲ್ಲಿ ಬಾರೇ ಇಲ್ಲಿ. ನಿಮ್ಮಮ್ಮನ್ನ ಕರ್ಕೊಂಡು ಬಾ, ಎದುರುಮನೆಯಿಂದ. ಕಾಶ್ಮೀರದಲ್ಲಿರೋ ನನ್ನ ಹಳೇ ಸ್ನೇಹಿತರು ಮಿಸ್ಟರ್ ಕರೀಸುಬ್ಬರಾವ್ ಬಂದಿದ್ದಾರೇಂತ ಹೇಳು. ಬೇಗ ಬರೋಕೆ ಹೇಳು, ಮಾಡರ್ನ್ ಹೋಟ್ಲಿಗೆ ತಕ್ಷಣ ಹೊರಡಬೇಕಂತೆ ಟ್ಯಾಕ್ಸಿ ಮಾಡ್ಕೊಂಡೂ, ಅಂತ! ಹಾಗಂದರೆ ಬೇಗ ಬರ್ತಾಳೆ ಆ ಕಸೂತೀ ಕೆಲಸಾ ಬಿಟ್ಟು ! "



" ಗೋಪು ಹೊಡೀತಾನಮ್ಮ.... ಆ ಪುಳ್ಳಂಗಾಯಿ ಉಂಡೆ ಕೊಡು.........
ಅವನ ಹಲ್ಲು ಮುರೀಶೀನಿ..."

ಅಸ್ತಿ! ಭಾರ! ಶಿಲೆ!

ರಾಜೀವಪುರದ ದೊಡ್ಡ ಕಾಲೇಜಿನ ಕಛೇರಿಯಲ್ಲಿ ನೌಕರವರ್ಗದವರೆಲ್ಲಾ ಗೂರಲುರೋಗ ಬಡಿದವರಂತೆ ಗುಸುಗುಟ್ಟುತ್ತಿದ್ದಾರೆ. ಸ್ವತಃ ಪ್ರಿನ್ಸಿಪಾಲರೇ ಪ್ರತಿಯೊಬ್ಬ ಗುಮಾಸ್ತನ ಮೇಜನ್ನೂ ಶೋಧಿಸುತ್ತಾ, ಕನ್ನಡಕವನ್ನು ಉಜ್ಜಿ ಕೊಳ್ಳುತ್ತಾ ಬಿಸಿಸುಯ್ಯುತ್ತಿದ್ದಾರೆ. ಬೇಕಾಗಿರುವ ಕಾಗದ ಸಿಗುತ್ತಿಲ್ಲ. 'ಫಿಲ್ಮ್ ಹಿಟ್ಸ್' ಪುಸ್ತಕಗಳು ಸಿಗುತ್ತಿವೆ. ಕಾದಂಬರಿಗಳು ಕಳಚಿಕೊಂಡು ಬೀಳುತ್ತಿವೆ. ಹೆಡ್‌ಗುಮಾಸ್ತೆ ಗ್ರೇಡಿನವರು ನಿಮಿಷನಿಮಿಷಕ್ಕೂ ಅಂಬಾಳ್ ಪುಡಿಯನ್ನು ಏರಿಸುತ್ತಾ ಏನನ್ನೋ ತಮ್ಮ ಸ್ಮೃತಿಪಥಕ್ಕೆ ಎಳೆದು ತಂದು ನಿಲ್ಲಿಸುವ ಸಾಹಸ ಮಾಡುತ್ತಿದ್ದಾರೆ. ಕಿಪಿಯಂತೆ ಕಿರುಗುಟ್ಟುವ ಕಾರಖೂನರು ; ತ್ರೋಭೆಯಂತೆ ಗುಡುಗುಟ್ಟುವ ಟೈಪ್‌ರೈಟರ್‌ಗಳು. ಭೌತಶಾಸ್ತ್ರದ ಪ್ರೊಫೆಸರ್ ಆದ ಪ್ರಿನ್ಸಿಪಾಲರು ಕಿಡಿಕಿಡಿಯಾಗುತ್ತಿದ್ದ ಹಾಗೆಲ್ಲಾ ಪಕ್ಕದಲ್ಲೇ ಪ್ರಯೋಗಮಂದಿರದಲ್ಲಿದ್ದ ಉಷ್ಣಮಾಪಕ ಯಂತ್ರದಲ್ಲಿ ಪಾದರಸದ ಮಟ್ಟ ಮೇಲಕ್ಕೇರುತ್ತಿತ್ತು. ಇಷ್ಟಕ್ಕೆಲ್ಲಾ ಕಾರಣ— ರಾಜೀವಪುರದ ದೊಡ್ಡ ಕಾಲೇಜಿನ ನೂತನ ಕಟ್ಟಡದ ಶಂಖುಸ್ಥಾಪನೆಯು ಜರುಗಿ ಎಷ್ಟು ವರ್ಷಗಳಾಯಿತೆಂಬುದನ್ನು ತಕ್ಷಣ ತಿಳಿಸಬೇಕೆಂದು ಶಿಕ್ಷಣ ಸಚಿವರಿಂದ ಪ್ರಿನ್ಸಿಪಾಲರಿಗೆ ಗುದ್ದುಕೊಂಡು ಬಂದಿದ್ದ ಕಾಗದ.

ದೊಡ್ಡ ಕಾಲೇಜಿನ ಕಟ್ಟಡದ ಶಂಖುಸ್ಥಾಪನೆ ಆಗಿ 20 ವರ್ಷಗಳಾಗಿದ್ದರೂ ಕಟ್ಟಡ ಕಟ್ಟುವ ಏರ್ಪಾಟು ನಡೆದಿರಲಿಲ್ಲ. ಈ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಕಾಲೇಜಿಗೆ ಓದುವುದಕ್ಕೆ ಬರುವ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿಯಾದ್ದರಿಂದ ಜಾಗ ಇಲ್ಲದೆ ಪಾಠ ಹೇಳಿಕೊಡುವುದೇ ಉಪಾಧ್ಯಾಯರಿಗೆ ಕಷ್ಟವಾಯ್ತು. ಹೇಳಿಕೊಡುವಷ್ಟು ಪಾಠವನ್ನು ಗ್ರಹಿಸುವುದೂ ಹುಡುಗರಿಗೆ ಕಷ್ಟವಾಯ್ತು. ಹೇಳಿಕೊಡದೆ ಇದ್ದ ಪಾಠಗಳೆಲ್ಲಾ ಬೆಳಕಿಗೆ ಬಂತು. ರಾಜೀವಪುರದ ಜನ ಬೊಬ್ಬೆ ಇಟ್ಟಿತು— ಎರಡು ಸಲ ಸೆನ್ಸಸ್ ನಡೆದು, ದೇಶ ಸ್ವತಂತ್ರವಾಗಿ, ಭಾಷಾವಾರ್ ಪ್ರಾಂತವಿಭಜನೆಯಾಗಿ, ಹಿಂದಿ ಚೀಣಿ ಭಾಯಿಭಾಯಿ ಆಗಿ, ಲ್ಯೂನಿಕ್ ಚಂದ್ರಗ್ರಹಕ್ಕೆ ಹೋಗಿ, ಗ್ಯಾರಿಪವರ್ಸ್ ಕೃಷೇವ್ ಕೈಗೆ ಸಿಕ್ಕಿ, ಇಡೀ ವಿಶ್ವವೇ ಇಷ್ಟೊಂದು ಬದಲಾವಣೆಯಾದರೂ ಹಳೇ ಗೂಡ್ಸ್‌ಷೆಡ್ಡಿನಲ್ಲೇ ವಿಜ್ಞಾನದ ಕಾಲೇಜನ್ನು ಮಾಡುತ್ತಿದ್ದೀರಲ್ಲ ಅಂತ ರಾಜೀವಪುರದ ನಾಯಕರು ಸರ್ಕಾರದ ಮೇಲೆ ಎರಗಿದರು! ಜನವಾಣಿ ಸರ್ಕಾರದ ಕಿವಿಗೆ ಬಿದ್ದು ಪ್ರಜಾಸರ್ಕಾರ ವರದಿ ತರಿಸುವ ಹುಕುಂ ಹೊರಡಿಸಿತ್ತು.

ಪ್ರಿನ್ಸಿಪಾಲರು ವರದಿ ಕಳಿಸಬೇಕಿತ್ತು. ಕಟ್ಟಡಕ್ಕೆ ಕಲ್ಲುಹಾಕಿದ ತಾರೀಕು ಅವರಿಗೆ ತಿಳಿಯದು. ಆದುದರಿಂದಲೇ ಅದಕ್ಕೆ ಸಂಬಂಧಪಟ್ಟ ಕಾಗದಗಳಿದ್ದ ಫೈಲ್ ಗೋಸ್ಕರ ಅವರು ಹುಡುಕಾಡುತ್ತಿದ್ದುದು. ಫೈಲ್ ಸಿಗದೆ ಏಲ್‌ಫೈಲ್ ಆದುದು. ಆ ಕೆಲಸ ಈ ಊರಲ್ಲಿ ನಡೆದಾಗ ಪಾಪ! ಪ್ರಿನ್ಸಿಪಾಲರು ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಉಚ್ಚಶಿಕ್ಷಣ ಪಡೆಯುತ್ತಿದ್ದರು!

ಒಂದು ವಾರ ಕಳೆದರೂ ಪ್ರಿನ್ಸಿಪಾಲರು ಸರ್ಕಾರಕ್ಕೆ ವರದಿ ಕಳಿಸಲಾಗಲಿಲ್ಲ. ಕಾರಣ ಶಂಖುಸ್ಥಾಪನೆಯ ತಾರೀಕು ತಿಳಿಯಲಿಲ್ಲ. ಅದಕ್ಕೆ ಸಂಬಂಧಪಟ್ಟ ಕಾಗದಗಳೊಂದೂ ಇಲ್ಲ. ಏನು ಮಾಡಬೇಕೆಂಬುದು ತೋಚದೆ ಭೌತಶಾಸ್ತ್ರದ ವಿಜ್ಞಾನಿಗಳಾದ ಪ್ರಿನ್ಸಿಪಾಲರು ಬೊಕ್ಕತಲೆಯ ಮೇಲೆ ಮೃದುವಾಗಿ ಕೈ ಆಡಿಸುತ್ತಿದ್ದರು. ಭೌತಶಾಸ್ತ್ರದ ಅನೇಕ ಸೂತ್ರಗಳನ್ನು ಅವರು ಬಿಡಿಸುವುದೇ ಹೀಗೆ! ಇದ್ದಕ್ಕಿದ್ದಹಾಗೆ ಅವರ ಮುಖದಲ್ಲಿ ಮುಗುಳ್ನಗೆ ತೇಲಿಬಂತು. ಅಪ್ಸರೆಯಂತೆ ಪ್ರಿನ್ಸಿಪಾಲರೂ 'ಕ್ರಿಟಿಕಲ್' ಆದರು. ಅರ್ಧ ಸೆಕೆಂಡಿನಲ್ಲಿ ಕಾಲೇಜ್ ಕಟ್ಟಬೇಕಾಗಿರುವ ನಿವೇಶನಕ್ಕೆ ಓಡಿದರು. ಅರ್ಧಗಂಟೆ ಆ ಚಚ್ಚೌಕವಾದ ಹಸರುಬಯಲಲ್ಲಿ ಅಡ್ಡಾಡಿದರು. ಪ್ರಕೃತಿದೇವಿಯ ಪರ್ಣಸಂಚಿತವಾದ ನೋಟದಿಂದ ಅರಳುತ್ತಿದ್ದ ಮುಖ ಸರ್ಕಾರದ 'ರಿಮೈಂಡರ್'ಗಳನ್ನು ಜ್ಞಾಪಿಸಿಕೊಂಡು ಹಾಗೇ ಕಳೆಗುಂದುತ್ತಿತ್ತು. ಪ್ರಿನ್ಸಿಪಾಲರಿಗೆ ತುಂಬಾ ನಿರಾಶೆಯಾದರೂ ಅವರು ತಮ್ಮ ಕಣ್ಣುಗಳನ್ನು ನಂಬಲಿಲ್ಲ. ಹೃದಯದ ಬಡಿತ ಜಾಸ್ತಿಯಾಗುತ್ತಲೇ ಇತ್ತು. ತಕ್ಷಣ ಅವರು ಕಾಲೇಜಿಗೆ ಬಂದು ತಮ್ಮ ಕೊಠಡಿಗೆ ಆರುಜನ ಅಸಿಸ್ಟೆಂಟರನ್ನು ಕರೆಸಿಕೊಂಡರು. ರಾತ್ರಿ ಸುಮಾರು 9 ಗಂಟೆ, ಅಮಾವಾಸ್ಯೆ. ಅಸಿಸ್ಟೆಂಟರುಗಳನ್ನು ಕಟ್ಟಿಕೊಂಡು ಮತ್ತೆ ನಿವೇಶನದ ಬಳಿ ಹೋದರು. ವಿಜ್ಞಾನಿಗಳ ಮನೋವಿಕಾರಗಳನ್ನರಿತಿದ್ದ ಅಸಿಸ್ಟೆಂಟರುಗಳು ಏನೋ ಅದ್ಭುತವಾದ ಸಂಶೋಧನೆ ಇರಬೇಕೆಂದು ಅರಿತು ಪ್ರತಿಭಟನೆಯನ್ನು ವ್ಯಕ್ತಪಡಿಸದೆ ಪ್ರೊಫೆಸರ್ ಸಾಹೇಬರ ಆಣತಿಯನ್ನು ಶಿರಸಾವಹಿಸಿ ಪಾಲಿಸಿದರು. "ನಿವೇಶನದಲ್ಲಿ ನಿಮಗೆ ಮನಸ್ಸಿಗೆ ಬಂದಂತೆ ಎದ್ವಾ ತದ್ವ ಓಡಿ" ಎಂದರು ಪ್ರಿನ್ಸಿಪಾಲರು. ಆ ಅಮಾವಾಸ್ಯೆ ಕತ್ತಲೆಯಲ್ಲಿ ಅಸಿಸ್ಟೆಂಟುಗಳು ಹುಚ್ಚುಹುಚ್ಚಾಗಿ ಆ ನಿವೇಶನದ ತುಂಬಾ ಓಡಾಡಿದರು. ಯಾರೊಬ್ಬರೂ ಕಲ್ಲು ಎಡವಿ ಬೀಳದೆ ಇದ್ದುದನ್ನು ಕಂಡ ಪ್ರಿನ್ಸಿಪಾಲರು ಮನಸ್ಸಿಗೆ ಧೈರ್ಯ ತಂದುಕೊಂಡರು. ತಾವು ಕಂಡಿದ್ದು ಕನಸಲ್ಲ ಎಂಬುದು ಅವರಿಗೆ ಮುಂದಟ್ಟಾಯಿತು. ಅವರು ಈ ಪ್ರಯೋಗವನ್ನು ನಡೆಸಿದ್ದು ಕಾಲೇಜ್ ಕಟ್ಟಡ ಕಟ್ಟುವ ನಿವೇಶನದಲ್ಲಿ ನೆಡಲಾಗಿದ್ದ ಕಲ್ಲನ್ನು ಪತ್ತೆಹಚ್ಚಲು ಎಂಬುದು ಅಸಿಸ್ಟೆಂಟರುಗಳಿಗೂ ಮುಂದಟ್ಟಾಯಿತು. ಕಲ್ಲಿನಲ್ಲಿ ತಾರೀಕು, ದಿವ್ಸ ಬರೆಯಲ್ಪಟ್ಟಿರುತ್ತೆ, ಅದನ್ನೇ ನೋಡಿ ಕಂಡುಬಂದರಾಯ್ತು ಎಂದು ನಿವೇಶನದ ಬಳಿ ಅಡ್ಡಾಡಲು ಹೋಗಿದ್ದ ಪ್ರಿನ್ಸಿಪಾಲರು ಅಸ್ತಿಭಾರದ ಶಿಲೆ

ಯನ್ನು ಕಾಣದೆ ತಬ್ಬಿಬ್ಬಾಗಿ ತಮ್ಮನ್ನು ತಾವೇ ನಂಬದೆ ತಮ್ಮ ಅಸಿಸ್ಟೆಂಟರು ಗಳನ್ನೂ ರಾತ್ರಿ ಕರೆದುಕೊಂಡು ಹೋಗಿ ಈ ಪ್ರಯೋಗ ನಡೆಸಿದ್ದು. ಇದರಿಂದಲೂ ಪ್ರಿನ್ಸಿಪಾಲರಿಗೆ ಪ್ರಯೋಜನವಾಗಲಿಲ್ಲ. ಊರಿನ ಜನಗಳ ಗಲಾಟೆ ಜಾಸ್ತಿ ಯಾಯ್ತು. ಸರ್ಕಾರದ ಒತ್ತಾಯ ಬಲವಾಯ್ತು. ಪ್ರಿನ್ಸಿಪಾಲರು ಲೋಕೋಪ ಯೋಗಿ ಇಲಾಖೆಗೆ ಹೋಗಿ ಪ್ರಧಾನ ಇಂಜಿನಿಯರನ್ನು ಕಂಡು ಈ ವಿಚಾರವನ್ನು ಪ್ರಸ್ತಾಪಮಾಡಿದರು. ಅವರು ಈ ವಿಚಾರವನ್ನು ಕೇಳಿ ಸಬ್-ಓವರ್ಸೀಯರ್ ಗಳನ್ನು ನಿವೇಶನದ ಬಳಿ ಓಡಿಸಿದರು. ಕಲ್ಲು ಕಳವಾಗಿದೆಯೆಂದು ಅವರು ಒಂದು ಲಿಖಿತ ಮೂಲ್ಕ ಒಪ್ಪಿಸಿದರು. ಇಂಜಿನಿಯರ್ ಸಾಹೇಬರು ಪೋಲೀಸ್‌ಗೆ ಫಿರ್ಯಾದು ಕೊಟ್ಟು ತನಿಖೆಯಾಗಬೇಕೆಂದು ಅರಿಕೆಮಾಡಿಕೊಂಡರು. ಸಬ್‌ಇನ್ಸ್ಪೆಕ್ಟರಿಂದ ದೊಡ್ಡ ಇನ್ಸ್ಪೆಕ್ಟರ್‌ಗೂ, ದೊಡ್ಡ ಇನ್ಸ್ಪೆಕ್ಟರಿಂದ ಡಿ.ಎಸ್.ಪಿ. ಸಾಹೇಬರಿಗೂ ತನಿಖೆ ಬಗ್ಗೆ ಕಾಗದಗಳು ಓಡಾಡಿದವು. ರಾಜೀವಪುರದ ರಾಜಧಾನಿಯಲ್ಲೇ ಸ್ವತಹ ಹಿರಿಯರ ಪರ ಅಮೃತಹಸ್ತದಿಂದ ಹಾಕಲ್ಪಟ್ಟಿದ್ದ ಅಸ್ತಿಭಾರದ ಶಿಲೆಯೇ ಕಳವಾದರೇ ರಾಜ್ಯದಲ್ಲಿ ನೆಮ್ಮದಿ ಶಾಂತಿ ಶುದ್ಧ ಕನಸು. ರಾಜ್ಯದಲ್ಲಿ ಕಳ್ಳಕಾಕರು ಹೆಚ್ಚುತ್ತಿದ್ದಾರೆ. ಪೋಲೀಸ್ ವ್ಯವಸ್ಥೆ ಕುಸಿದಿದೆ!—ಅಂತ ಶಾಸನಸಭೆಗಳಲ್ಲಿ ಪ್ರತಿನಿಧಿಗಳು ಜಾಡಿಸಿದರು. ಪತ್ರಿಕೆಗಳೂ ನಿರ್ಭಯವಾಗಿ ಬರೆದವು—"ಕಾಂಗ್ರೆಸ್ ಅಧಿವೇಶನಗಳಲ್ಲಿ ಮಾತ್ರ ಪೋಲೀಸ್ ಸಿಬ್ಬಂದಿಯನ್ನು ಬಲವಾಗಿ ಹಾಕಿ ವಿಶೇಷ ವಾಗಿ ಹಣ ಖರ್ಚುಮಾಡುತ್ತೀರಿ. ಅಧಿವೇಶನ ಮುಗಿದಮೇಲೆ ಸದಸ್ಯರೆಲ್ಲಾ ಊರಿಗೆ ಹಿಂತಿರಿಗಿ ಬರೊಲ್ಲವೇ? ವಿಶೇಷ ಪೋಲೀಸ್ ಸಿಬ್ಬಂದಿಯನ್ನು ಖಾಯಂ ಮಾಡಿ ಎಲ್ಲಾ ಊರುಗಳಲ್ಲೂ ಬಂದೋಬಸ್ತು ಮಾಡುವುದು ಅಗತ್ಯ" ಅಂತ. ಸುದ್ದಿ ಕೇಂದ್ರ ಸಚಿವಮಂಡಲಕ್ಕೂ ಮುಟ್ಟಿತು. ತಕ್ಷಣ ಸಚಿವರೇ ತನಿಖೆಯಲ್ಲಿ ಖುದ್ದು ಆಸಕ್ತಿ ವಹಿಸಿದರು! ಸಿ. ಐ. ಡಿ.ಗಳ ಕಾಟದಿಂದ ನಗರದ ಚಿತ್ರಮಂದಿರ ಗಳಿಗೆ ಎರಡನೆ ಆಟಕ್ಕೆ ಜನಗಳು ಬರುವುದು ಕಡಿಮೆಯಾಯ್ತು. ಸಿನಿಮಾ ಮಂದಿರಗಳ ಮಾಲೀಕರೆಲ್ಲಾ ಬೊಬ್ಬೆ ಇಟ್ಟರು. ತನಿಖೆ ನಾಲ್ಕೈದು ವರ್ಷ ಮುಂದುವರೆಯಿತು. ತನಿಖಾಂಶಗಳನ್ನು ಪರಿಶೀಲಿಸಲು ಸರ್ಕಾರ ಒಂದು ವಿಶೇಷ ಸಮಿತಿಯನ್ನು ನೇಮಕಮಾಡಿ ಅವಿಶ್ವಾಸ ನಿರ್ಣಯವನ್ನು ಮೇಲೆ ಬರದಂತೆ ಕಾದು ಕೊಂಡಿತು.

ಕಾಲೇಜು ಮಾತ್ರ ಗೂಡ್ಸ್‌ಷೆಡ್ಡಿನಲ್ಲೇ ಎಂದಿನಂತೆ ನಡೆಯುತ್ತಿತ್ತು. ಅವು ಹಿಡಿಸದೆ ನಾಲ್ಕಾರು ಖಾಸಗಿ ಗೋಡೌನುಗಳನ್ನು ಬಾಡಿಗೆಗೆ ಪಡೆದು ಜೂಆಲಜಿ ಪಾಠಗಳು ನಡೆಯುವಂತೆ ತಕ್ಕ ವ್ಯವಸ್ಥೆ ಮಾಡಲಾಯ್ತು. ಸ್ಥಳೀಯ ಪತ್ರಿಕೆಗಳು ಕಟುವಾಗಿ ಬರೆದು ಸರ್ಕಾರವನ್ನು ಅಲ್ಲಗಳೆದರು. ಬಹಿರಂಗಪತ್ರಗಳನ್ನು ಬರೆದರು. ಹುಡಿಗಿಯರ ತಾಯಂದಿರು ಪ್ರಿನ್ಸಿಪಾಲರ ಕೊಠಡಿಗೆ ನುಗ್ಗಿದರು. ಹುಡುಗರು

ಅಸಿಸ್ಟೆಂಟ್ ಪ್ರೊಫೆಸರಗಳನ್ನು ಹಿಡಿದು ನಿಲ್ಲಿಸಿದರು. ಮುಖ್ಯಮಂತ್ರಿಯು ಜವಾಬ್ದಾರಿಯನ್ನು ಶಿಕ್ಷಣಸಚಿವನ ತಲೆಯ ಮೇಲೆ ಹಾಕಿದನು. ಶಿಕ್ಷಣಸಚಿವನು ಶಾಸನಸಭೆಯಲ್ಲಿ ಹೇಳಿಕೆ ಕೊಟ್ಟು, ಸರ್ಕಾರ ವರದಿಯನ್ನೂ ಅಂಕಿ ಅಂಶಗಳನ್ನೂ ತರಿಸಿಕೊಳ್ಳಲು ಏರ್ಪಾಟುಮಾಡಿದೆಯೆಂದೂ; ಆದಷ್ಟು ಬೇಗ ಕೆಲಸವನ್ನು ಮಾಡಲು ಪ್ರಯತ್ನಿಸಲಾಗುವುದೆಂದೂ ಸಮಾಧಾನ ಹೇಳಿದನು.

ಮುಖ್ಯ ಇಂಜಿನಿಯರ್‌ರವರು ಕೊಟ್ಟ ಫಿರ್ಯಾದನ್ನು ಪೋಲೀಸ್ ಇಲಾಖೆಯವರು ಐದು ವರ್ಷಗಳ ಕಾಲ ತನಿಖೆಮಾಡಿ ಏನು ಪ್ರಗತಿಯನ್ನೂ ಸಾಧಿಸಲಾಗಲಿಲ್ಲ. ಗುಮಾನಿ ನೆಪದಲ್ಲಿ ಹತ್ತಾರು ಪುಂಡರುಗಳನ್ನು ಹಿಡಿದುಹಾಕಿ ಮೂಳೆ ಮುರಿಯಲಾಯ್ತು. ಹೊಸ ಕೇಸುಗಳು ಸಿಕ್ಕಿದವೇ ಹೊರತು ಅಸ್ತಿಭಾರಶಿಲೆಯ ಕಳವುಕೇಸು ಪತ್ತೆಯಾಗಲಿಲ್ಲ. ಪ್ರಿನ್ಸಿಪಾಲರು ಮನಶ್ಶಾಂತಿಯನ್ನು ಪಡೆಯುವುದಕ್ಕೋಸ್ಕರ ಕೆಲವು ಕಾಲ ರಜಾ ತೆಗೆದುಕೊಂಡು ದೂರದ ಹಿಲ್‌ಸ್ಟೇಷನ್‌ಗೆ ಹೊರಟು ಹೋದರು. ಪಕ್ಕದ ಊರಿನ ಮನಶ್ಶಾಸ್ತ್ರದ ಪ್ರೊಫೆಸರನ್ನು ರಾಜೀವಪುರದ ದೊಡ್ಡ ಕಾಲೇಜಿಗೆ ಪ್ರಿನ್ಸಿಪಾಲರನ್ನಾಗಿ ಮಾಡಲಾಯ್ತು. ಪ್ರಿನ್ಸಿಪಾಲರು ಮನಶ್ಶಾಸ್ತ್ರದಲ್ಲಿ ತುಂಬಾ ಗಟ್ಟಿಗರು. ಜನಗಳ ಒಳನೋವನ್ನು ತಿಳಿಯಬಲ್ಲವರು. ಹುಡುಗರ ಬುದ್ಧಿಯ ಮಟ್ಟವನ್ನೂ ಮನಸ್ಸಿನಲ್ಲೇ ಅಳೆಯಬಲ್ಲವರು. ಮನಸ್ಸನ್ನು ಓದಬಲ್ಲವರು.

ಪ್ರಿನ್ಸಿಪಾಲರು ಅಧಿಕಾರಸೂತ್ರವನ್ನು ವಹಿಸಿದ ತಕ್ಷಣ ಮಾಡಬೇಕಾದ ಕೆಲಸ—ಸರ್ಕಾರಕ್ಕೆ ನೂತನ ಕಟ್ಟಡದ ಸಂಬಂಧವಾದ ವರದಿ ಕಳಿಸುವುದು. ಇದಕ್ಕೆ ಸಂಬಂಧಪಟ್ಟ-ಹಿಂದಿನ ಪ್ರಿನ್ಸಿಪಾಲರು ಬೆಳೆಸಿದ ಫೈಲ್ ನೋಡಿ ಮನಶ್ಶಾಸ್ತ್ರದ ಪ್ರೊಫೆಸರ್‌ರವರೂ ಐಲ್‌ಫೈಲಾದರು! ಶಾಸ್ತ್ರರೀತ್ಯ ಸಮಸ್ಯೆಯನ್ನು ವಿಭಜಿಸಿದರು. ಸರ್ಕಾರದ ಆರ್ಥಿಕಪರಿಸ್ಥಿತಿಯನ್ನರಿತರು. ರಾಜೀವಪುರದ ಜನಗಳ ಇಂಗಿತವನ್ನೂ ಅರಿತರು. ದೊಡ್ಡ ಕಾಲೇಜಿನ ಕಟ್ಟಡ ತಮ್ಮ ಕಾಲದಲ್ಲೇ ಕಟ್ಟಲ್ಪಟ್ಟು ಮುಗಿದರೆ ತಮಗೆ ಜನಗಳ ಮೆಚ್ಚಿಗೆ ಸಿಕ್ಕಿ ಸರ್ಕಾರದಲ್ಲಿ ದೊಡ್ಡ ಹುದ್ದೆ ಸಿಕ್ಕೇ ಸಿಗುತ್ತದೆ ಎಂಬ ಆಶೆ ಪ್ರಿನ್ಸಿಪಾಲರ ಮನಸ್ಸಿನಲ್ಲಿ ಬೇರೂರಿತು. ಪ್ರಿನ್ಸಿಪಾಲರು ಆತ್ಮವಿಶ್ವಾಸದಿಂದ ವರದಿಯನ್ನು ತಯಾರು ಮಾಡಲು ಪ್ರಾರಂಭಿಸಿದರು. ಕಟ್ಟಡದ ಶಂಖುಸ್ಥಾಪನಾ ಮಹೋತ್ಸವದ ತಾರೀಕು ಸಿಗದ ಹೊರತು ವರದಿ ಮುಂದುವರೆಯುವ ಹಾಗಿಲ್ಲ. ಸರ್ಕಾರ ಮುಖ್ಯವಾಗಿ ಕೇಳಿರುವ ಪ್ರಶ್ನೆಯೇ ಅದು. ಈ ಅಂಶವು ನಮೂದಿಸದೆ ಕಳಿಸಲಾಗಿದ್ದ ವರದಿಯು ಅಪೂರ್ಣವೆಂದು ಹಿಂದಕ್ಕೆ ಕಳಿಸಲಾಗಿತ್ತು. ಪರಿಸ್ಥಿತಿ ಇಷ್ಟೊಂದು ಬಿಗಡಾಯಿಸಿಕೊಂಡಿರುವಾಗ ಕಾಲೇಜಿಗೆ ಕಟ್ಟಡ ಆಗುವುದು ದುಸ್ಸಾಧ್ಯ ಅಂತಲೇ ಜನರು ಆ ಯೋಚನೆ ಬಿಟ್ಟರು. ಸರ್ಕಾರವೂ ಕೈಬಿಟ್ಟಿತು. ಆದರೆ ಈಗ ಪ್ರಿನ್ಸಿಪಾಲರು ಅಷ್ಟು ಸುಲಭವಾಗಿ ಕೈಬಿಡುವಹಾಗಿಲ್ಲ. ಅವರ

ಕಾಲೇಜಿಗೆ ಪ್ರವೇಶ ಕೋರಿ ಈ ವರ್ಷ ನೂರುಸಾವಿರ ವಿದ್ಯಾರ್ಥಿಗಳು ಅರ್ಜಿ ಹಾಕಿರುವರು. ಅವರ ಗೂಡ್ಸ್‌ಷೆಡ್ಡು ಹಿಡಿಸುವುದು ಮುನ್ನೂರೇ ವಿದ್ಯಾರ್ಥಿಗಳನ್ನು ! ಪ್ರಿನ್ಸಿಪಾಲರಿಗೆ ಏನು ಮಾಡಬೇಕೆಂಬುದು ತೋಚಲಿಲ್ಲ. ಹುಡುಗರಿಗೆ ಹೇಳಿದರೆ ಅವರು ಕೇಳುವಹಾಗಿಲ್ಲ. ಹುಡಿಗಿಯರಿಗೆ ಹೇಳುವಹಾಗಿಲ್ಲ. ತಂದೆ ತಾಯಿಗಳಿಗೆ ಕಷ್ಟ ಹೇಳಿಕೊಳ್ಳೋಣ ಎಂದರೆ ಅವರೆಲ್ಲಾ ರಾಜಕಾರಣಿಗಳಾಗಿ ಮಾತಿನ ಮಲ್ಲರಾಗಿದ್ದಾರೆ. ಸರ್ಕಾರಕ್ಕೆ ಬರೆದರೆ ವರದಿ ಕಳಿಸು ಕೇಳಿರುವಂತೆ, ಎಂದು ಬರೆಯುತ್ತಾರೆ. ಪ್ರಿನ್ಸಿಪಾಲರು ಹಿಂದೆಂದೂ ಇಂಥ ತೊಡಕಿಗೆ ಸಿಕ್ಕಿಹಾಕಿಕೊಂಡಿರಲಿಲ್ಲ.

ಆಗಸ್ಟ್ ೧೫ರಂದು ನಡೆದ ಸ್ವಾತಂತ್ರ್ಯೋತ್ಸವಕ್ಕೆ ಊರಿನ ಪ್ರಮುಖರನ್ನೆಲ್ಲಾ ಕಾಲೇಜಿಗೆ ಬರಮಾಡಿಕೊಂಡು ಸ್ವತಃ ಪ್ರಿನ್ಸಿಪಾಲರೇ ಒಂದು ಸತ್ಕಾರಕೂಟವನ್ನೇರ್ಪಡಿಸಿದರು. ಗಣಪಯ್ಯನ ಹೋಟಲಿನ ತಿಂಡಿ-ತೀರ್ಥಗಳನ್ನೇ ತರಿಸಲಾಗಿತ್ತು. ತಿಂಡಿಯಲ್ಲಿ ತಲ್ಲೀನರಾಗಿದ್ದ ಪುರಪ್ರಮುಖರು ಗಣಪಯ್ಯನನ್ನು ಕೊಂಡಾಡಿದ್ದೂ ಕೊಂಡಾಡಿದ್ದೇ. "ಮೂರಂತಸ್ತಿನ ಇಂದ್ರಭವನ ಕಟ್ಟಿ, ಕೈಗೆ ಚಿನ್ನದ ಕಪ್ಪ ಹಾಕ್ಕೊಂಡು ಕಾರಲ್ಲೇ ಓಡಾಡುವ ಈ ಗಣಪಯ್ಯನು 20 ವರ್ಷದಿಂದ ಅಗ್ರಹಾರದಲ್ಲಿ ಸ್ವತಹ ತಾನೇ ಹಿಟ್ಟು ರುಬ್ಬುತ್ತಿದ್ದ ಸಾರ್ ; ಈ ಕಾಲೇಜಿನ ಹೊಸ ಕಟ್ಟಡದ ಶಂಖುಸ್ಥಾಪನೆ ಮಹೋತ್ಸವದ ದಿವಸವೂ ಗಣಪಯ್ಯನೇ ತಿಂಡಿ ಕಾಫಿಯನ್ನು ಸಪ್ಲೈಮಾಡಿದ್ದು ಸಾರ್" ಎಂದು ಊರಿನ ಪೌರಸಭಾಧ್ಯಕ್ಷರು ಗಣಪಯ್ಯನನ್ನು ಪ್ರಿನ್ಸಿಪಾಲರಿಗೆ ಪರಿಚಯ ಮಾಡಿಕೊಟ್ಟರು. ಮುದ್ದಾದ ಗುಂಡುಮುಖ. ಕಿವಿಯಲ್ಲಿ ಮಿರುಮಿರುಗುವ ಹತ್ತಕಡಕುಗಳು. ತುಂಬಿಕೊಂಡ ಹೊಳೆಯುವ ಕೆನ್ನೆಗಳು. ಹತ್ತು ಬೆರಳುಗಳಿಗೂ ಚಿನ್ನದ ಉಂಗುರಗಳು. ಕೈಗೆ ಚಿನ್ನದ ಥೋಡ. ಗಣಪಯ್ಯನ ಮುಖದಲ್ಲಿ ಶ್ರೀಮಂತ ನಗೆ ಚಿಮ್ಮುತ್ತಿತ್ತು. ಗಣಪಯ್ಯ ಹಸನ್ಮುಖದಿಂದ ಪ್ರಿನ್ಸಿಪಾಲರ ಕಡೆ ತಿರಿಗಿ, "ಅಧ್ಯಕ್ಷರು ಹೇಳಿದ್ದೆಲ್ಲಾ ನಿಜ ಸಾರ್. ಭಗವಂತನ ಅನುಗ್ರಹದಿಂದ ಲಕ್ಷ್ಮಿ ಒಲಿದಿದ್ದಾಳೆ ಸಾರ್. ಸರಸ್ವತಿ ಅನುಗ್ರಹ ನನಗೇನೂ ಇಲ್ಲ ಸಾರ್. ಕಲ್ಲು ಕೂಡ ನನ್ನ ಮನೆಯಲ್ಲಿ ಚಿನ್ನವಾಯ್ತು ಸಾರ್" ಎಂದನು. ಗಣಪಯ್ಯನ ಈ ಮಾತುಗಳು ಪ್ರೊಫೆಸರ್ ಸಾಹೇಬರ ಒಳಮನಸ್ಸನ್ನು ಜಾಗೃತಗೊಳಿಸಿತು. ಪ್ರಿನ್ಸಿಪಾಲರು ತಾವು ಪುರಪ್ರಮುಖರನ್ನು ಕರೆದಿರುವ ಉದ್ದೇಶವನ್ನೂ ಕಾಲೇಜ್ ಕಟ್ಟಡದ ಅವಶ್ಯಕತೆಯನ್ನೂ ಹೇಳಿ, ಕಾಲೇಜ್ ಕಟ್ಟಡದ ನಿವೇಶನದಲ್ಲಿ ನೆಡಲಾಗಿದ್ದ ಅಸ್ತಿಭಾರಶಿಲೆಯು ಇನ್ನೂ ದೊರಕಿಲ್ಲವೆಂದೂ, ಅದು ಸಿಕ್ಕಿ ವರದಿ ಕಳಿಸುವವರೆಗೂ ಸರ್ಕಾರ ಮುಂದಿನ ಕೆಲಸವನ್ನು ಮಾಡುವುದಿಲ್ಲವೆಂಬುದನ್ನೂ ವಿವರಿಸಿ ಹೇಳಿದರು. ಪುರಪ್ರಮುಖರೆಲ್ಲಾ ಸರ್ಕಾರವನ್ನು ನಾನಾ ರೀತಿಯಲ್ಲಿ ಟೀಕಿಸಿ ಬೈದು ಎದ್ದುಹೋದರು. ಪ್ರಿನ್ಸಿಪಾಲರು ಯಾವ ಉದ್ದೇಶಕ್ಕಾಗಿ ಅವರನ್ನು ಕರೆದಿದ್ದರೋ ಅದು ಸಫಲವಾಗಲಿಲ್ಲ. ಹಣದ ಬಾಚ್ಚೆಂಬ

ಸೂಕ್ಷ್ಮವನ್ನು ಅನೇಕರು ಅರಿತು ಉಪಾಯವಾಗಿ ಕಂಬಿಕಿತ್ತರು. ಸಭೆಯೆಲ್ಲಾ ಖಾಲಿಯಾಗಿ ಪ್ರಿನ್ಸಿಪಾಲರು ಮಾತ್ರ ತಣ್ಣೀರು ಕುಡಿಯುತ್ತಾ ಇದ್ದರು. ಆಗ ಗಣಪಯ್ಯನು ಹಸನ್ಮುಖದಿಂದ ಕುಡಿನೋಟವನ್ನು ಹಾರಿಸುತ್ತಾ "ಆ ಕಲ್ಲು ಇನ್ನು ಸಿಗಲಾರದು ಸಾರ್. ಆಗಬೇಕಾಗಿರುವುದು ಕಟ್ಟಡ ಅಲ್ಲವೆ. ಇಗೋ ತೆಗೆದು ಕೊಳ್ಳಿ" ಎಂದು 50 ಸಾವಿರ ರೂಪಾಯಿಗಳ ಚೆಕ್ಕನ್ನು ಪ್ರಿನ್ಸಿಪಾಲರಿಗೆ ಕೊಟ್ಟು ನಮಸ್ಕಾರಮಾಡಿ ಹೊರಟುಹೋದನು.

ಗಣಪಯ್ಯನು ಕಾಲೇಜ್ ಕಟ್ಟಡಕ್ಕೋಸ್ಕರ 50 ಸಾವಿರ ರೂಪಾಯಿ ದಾನ ಕೊಟ್ಟ ಸುದ್ದಿ ಪ್ರಮುಖ ಪತ್ರಿಕೆಗಳಲ್ಲೆಲ್ಲಾ ಅಚ್ಚಾದವು, ಊರಿನವರೆಲ್ಲಾ ಗಣಪಯ್ಯ ನನ್ನು ಮನಸಾರೆ ಕೊಂಡಾಡಿದರು. ಪುರಸಭೆಯವರು ಗಣಪಯ್ಯನನ್ನು ಗೌರವ ರೀತಿಯಲ್ಲಿ ಸತ್ಕರಿಸಲು ನಿರ್ಧರಿಸಿದರು.

ನೂತನ ಕಟ್ಟಡ ಕಟ್ಟಬೇಕಾಗಿರುವ ನಿವೇಶನದಲ್ಲೇ ನಿರ್ಮಿಸಲಾಗಿದ್ದ ತಳಿರು ತೋರಣಗಳಿಂದಲಂಕೃತವಾದ ಹಸುರುವಾಣಿ ಚಪ್ಪರದಲ್ಲಿ ಮುಖ್ಯಸಚಿವರ ಅಧ್ಯಕ್ಷತೆ ಯಲ್ಲಿ ಗಣಪಯ್ಯನ ಗೌರವಾರ್ಥವಾಗಿ ಸತ್ಕಾರಸಮಾರಂಭವು ನಡೆಯಿತು. ಊರಿನ ಗಣ್ಯವ್ಯಕ್ತಿಗಳೆಲ್ಲಾ ಹಾಜರಾಗಿದ್ದರು. ಬಲೂನುಗಳನ್ನು ಹಾರಿಸಲಾಗಿತ್ತು. ಥೋಂಡೂಬಾಯಿಯವರ ಸುಶ್ರಾವ್ಯವಾದ ಸಂಗೀತದ ಏರ್ಪಾಡಾಗಿತ್ತು. ಮುಖ್ಯ ಮಂತ್ರಿಗಳು ಯಥಾಪ್ರಕಾರ ಭಾಷಣಮಾಡಿ, ವಿದ್ಯಾಕ್ಷೇತ್ರದಲ್ಲಾಗಬೇಕಾಗಿರುವ ಸುಧಾರಣೆಗಳನ್ನೆಲ್ಲಾ ವಿವರಿಸಿ ಹೇಳಿ, ಸರ್ಕಾರ ಇದಕ್ಕೆ ಅಂಕಿ ಅಂಶಗಳನ್ನು ಶೇಖರಿ ಸುತ್ತಿದೆಯೆಂದೂ ; ವಿಶೇಷ ಸಮಿತಿಯನ್ನು ನೇಮಕಮಾಡಿದೆಯೆಂದೂ ಹೇಳಿದರು. ಗಣಪಯ್ಯನವರ ಉದಾರ ಮನೋಭಾವವನ್ನು ಹೊಗಳುತ್ತಾ, ಇಂಥ ದಾನಿಗಳು ಕೊಡುಗೈಯಿಂದ ಹಣ ಕೊಡಬೇಕೆಂದೂ, ಸರ್ಕಾರವು ಇಂಥವರ ಹೆಸರುಗಳ ಪಟ್ಟಿ ಮಾಡಿ ರಾಷ್ಟ್ರಾಧ್ಯಕ್ಷರಿಗೆ ಕಳಿಸಿಕೊಡುವುದೆಂದೂ ಹೇಳಿ, ಹಾರವನ್ನು ಹಾಕಿ ತುರಾಯನ್ನು ಕೈಗೆ ಕೊಟ್ಟರು. ಗಣಪಯ್ಯನು ತನ್ನ ಜೀವಮಾನದಲ್ಲಿ ಇಂಥ ಗೌರವವನ್ನು ಎಣಿಸಿರಲಿಲ್ಲ. ಇಷ್ಟೆಲ್ಲಾ ತನ್ನ ಹಣಕ್ಕೆಂಬುದೂ ಅವನಿಗೆ ಗೊತ್ತಿತ್ತು. ಅವನು ಹಸನ್ಮುಖಿಯಾಗಿ ಎದ್ದು ಮುಖ್ಯಸಚಿವರಿಗೂ, ಪ್ರಿನ್ಸಿಪಾಲರಿಗೂ ನಮಸ್ಕಾರ ಮಾಡಿ ಹಿಟ್ಟುರುಬ್ಬುವ ಶೈಲಿಯಲ್ಲೇ ಎರಡು ಗಂಟೆ ಕಾಲ ಹಾಕಿ ಹುರಿದನು! ಮುಖ್ಯಸಚಿವರು ತುಟಿಪಿಟಿಕ್ ಎನ್ನದೆ ಕೂತು ಭಾಷಣ ಕೇಳಿ ತತ್ತರಿಸಿಹೋದರು. ನೆರೆದ ಜನಸ್ತೋಮ ಗಣಪಯ್ಯನನ್ನು ಚಪ್ಪಾಳೆಗಳ ತೂಗುಯ್ಯಾಲೆಯಲ್ಲಿಟ್ಟು ತೂಗಿದರು! ಚಿನ್ನದ ಕಪ್ಪವನ್ನು ಹಿಂದಕ್ಕೆಳೆಯುತ್ತಾ ಗಣಪಯ್ಯನು ತನಗೆ ಲಕ್ಷ್ಮಿ ಒಲಿದ ಕಥೆಯನ್ನು ಹೇಳಿದನು. 20 ವರ್ಷಗಳ ಹಿಂದೆ ತಾನು ಈ ಕಾಲೇ ಜಿನ ಕಟ್ಟಡದ ಶಂಖುಸ್ಥಾಪನೆಯ ಮಹೋತ್ಸವದಲ್ಲಿ ಅತಿಥಿಗಳಿಗೆ ತಿಂಡಿ ಕಾಫಿ ಯನ್ನು ಸರಬರಾಜು ಮಾಡಿದನೆಂದೂ ; ಲೋಕೋಪಯೋಗಿ ಇಲಾಖೆಯವರು

ತನ್ನನ್ನು ಹೆದರಿಸಿ ಬಿಲ್ಲಿನ ಹಣ ಕೊಡಲಿಲ್ಲವೆಂದೂ, ಅಲ್ಲಿಂದಾಚೆಗೆ ಐದು ವರ್ಷದ ನಂತರ ಒಂದಿನ ಸಂಜೆ ವಾಕಿಂಗ್ ಹೋಗುತ್ತಿದ್ದಾಗ, ಕಾಲೇಜ್ ಕಟ್ಟಡದ ನಿವೇಶನ ವನ್ನು ಬಳಸುತ್ತಿದ್ದಾಗ ತನಗೆ ಬರಬೇಕಾಗಿದ್ದ ಬಿಲ್ಲಿನ ಬಾಕಿಯೂ, ಸಬ್-ಓವರ್ಸೀ ಯರ್ ಪುಂಡುತನವೂ ಜ್ಞಾಪಕಕ್ಕೆ ಬಂದಿತೆಂದೂ ; ಹೋಟಲಿನಲ್ಲಿ ಚಟ್ನಿಯನ್ನು ಅರೆಯಲು ಅಗಲವಾದ, ನಯವಾದ ಕಲ್ಲಿನ ಅವಶ್ಯಕತೆ ಇತ್ತೆಂದೂ ; ಈ ನಿವೇಶನ ದಲ್ಲಿ ನೆಡಲಾಗಿದ್ದ ಶಂಖುಸ್ಥಾಪನೆಯ ಕಲ್ಲು ನೋಮಾರಿಯಾಗಿ ಇಲ್ಲಿ ಬಿದ್ದಿತ್ತೆಂದೂ, ಅದನ್ನು ತಾನು ಹೋಟಲಿಗೆ ಸಾಗಿಸಿದನೆಂದೂ ; ಅಲ್ಲಿಂದಾಚೆಗೆ ಶುಕ್ರಮಹರ್ದೆಶೆ ಬಂದಂತೆ ತನಗೆ ವ್ಯಾಪಾರವು ಕುದುರಿ ಹಣವು ಕೂಡಿತೆಂದೂ ; ತನ್ನ ಸಕಲ ಐಶ್ವರ್ಯವೂ ಈ ಅಸ್ತಿಭಾರದ ಶಿಲೆಯ ಮೇಲೆ ಅರೆಯಲ್ಪಟ್ಟ ಚಟ್ನಿಯ ಮಹತ್ವ ದ್ದೆಂದೇ ತನ್ನ ನಂಬಿಕೆ ಎಂದೂ ; ಆದ್ದರಿಂದಲೇ ಉಪಕಾರವನ್ನು ಹೊಂದಿದ ತಾನು ಈ ಕಾಲೇಜ್ ಕಟ್ಟಡದ ನಿಧಿಗೆ ಐವತ್ತುಸಾವಿರ ರೂಪಾಯಿಗಳನ್ನು ಕೊಟ್ಟಿರುವೆ ನೆಂದೂ ಗಣಪಯ್ಯನು ರಾಜೀವಪುರದ ಪ್ರಜಾಕೋಟಿಯ ಮಧ್ಯೆ ನಿಂತು ಸಾರಿದನು. ಸಭೆಯಲ್ಲಿ ಚಪ್ಪಾಳೆಗಳೂ ಹರ್ಷೋದ್ಗಾರಗಳೂ ಪ್ರವಾಹದಂತೆ ಭೋರ್ಗರೆದವು. ಮುಖ್ಯಸಚಿವರು ಇದನ್ನೆಲ್ಲಾ ಕೇಳಿ ಟೊಪ್ಪಿಯ ಮೇಲೆ ಬೆರಳಿಟ್ಟುಕೊಂಡರು. ಇಂಜಿನಿಯರ್ ಸಾಹೇಬರು ಹೊಟ್ಟೆ ಕಿವಿಚಿಕೊಂಡರು. ಡಿ.ಎಸ್.ಪಿ. ಸಾಹೇಬರು ಕಣ್‌ಕಣ್ ಬಿಟ್ಟರು. ಅಷ್ಟೊಂದು ಹಣ ಗಣಪಯ್ಯನ ಹೋಟಲಿಗೆ ಸುರಿದಿದ್ದ ಜನ ಬಾಯ್‌ಬಾಯ್ ಬಿಟ್ಟರು. ಪ್ರಿನ್ಸಿಪಾಲರು ಬೊಕ್ಕತಲೆಯ ಮೇಲೆ ನುಣುಪಾಗಿ ಕೈಬೆರಳುಗಳನ್ನಾಡಿಸುತ್ತಾ "ಇದೆಲ್ಲಾ ಬರೀ ಕಲ್ಲಿನ ಮಹತ್ವವೇ ಅಲ್ಲ, ಅದರ ಮೇಲೆ ಆಡಿದ ಕೈಯಲ್ಲೂ ಧನರೇಖೆ ಇದ್ದಿರಬೇಕು" ಅಂದರು—ರಾಜೀವಪುರದಲ್ಲಿ!

—ಹಾ. ರಾ.

" ಪೆಪ್ಪರ್‌ಮೆಂಟ್ !—ಗಳಕ್ "

ದವಡೇಲಿದ್ದ ಪೆಪ್ಪರಮೆಂಟಿನ ಸಿಹಿಯನ್ನು ಚೀಪ್ತಾ ಚೀಪ್ತಾ ಬಹುಕಾಲ ಅನುಭವಿಸೇನು ಅಂತ ಇದ್ದಾಗ ಯಾವ ಮಾಯದಲ್ಲೋ ಸ್ವಲ್ಪ ಹೊತ್ತಿನಲ್ಲೇ ಅದು ನಾಲಗೆ ಮೇಲೇರಿ ಜಾರಿ, ಗಂಟಲೊಳಕ್ಕೆ ಬಿದ್ದು ಹೊಟ್ಟೆಯನ್ನು ಸೇರೇ ಬಿಡುತ್ತೆ. ಬಾಯಿಗೆ ತಿರುಗಿ ಮೆಲಕು ಹಾಕಿ ಮರಕಳಿಸುಕ್ಕೆ ಸಾಧ್ಯವೇ ಇಲ್ಲ. ಹೊಟ್ಟೆಗೆ ಹೋದಮೇಲೆ ಪೆಪ್ಪರಮೆಂಟಿನ ಒಳಗೆ ಕಹಿಯಾದ ಔಷಧಿ ತುಂಬಿತ್ತು ಅಂತ ಗೊತ್ತಾದಾಗ ಸಿಹಿಮರೆತು ಕಹಿಕಾಣದೆ ಹೊಟ್ಟೇಲಿ ಔಷಧಿಯ ವಿಷ ಮಾತ್ರ ಉಳಿಯುತ್ತೆ ಅಲ್ಲವೇ ?

ಯಾರಾದರೂ ವಿನಾಕಾರಣ ಹಾಗೆ ಮಾತನಾಡಬೇಕು ನೋಡಿ, ಕೋಪ ಬಂದಾಗ ನಮ್ಮನ್ನು ರೇಗಿಸಿದಾಗ ಇಲ್ಲದೆ ಇದ್ದರೆ ನಮ್ಮ ಮನಸ್ಸಿನಲ್ಲೇ ಕಹಿ ತುಂಬುತ್ತೆ !! ನನ್ನ ಬಾಲ್ಯದಲ್ಲಿ ಮನೆ ಮೇಷ್ಟ್ರು " ಖಖಖ " ಎಂದು ನನ್ನ ಮೇಲೆ ಆಗಾಗ ರೇಗುತ್ತಿದ್ದರು. ಪಾಪ ! ಮೇಷ್ಟ್ರು ಉಗ್ಗುತ್ತಾರೆ ಅಂತಲೇ ಆಗ ಅಂದು ಕೊಂಡಿದ್ದೆ. ಈಗ ಅರ್ಥವಾಗುತ್ತೆ ! ಮೂರು ಸರ್ತಿ ಖ ಅಂದರೆ ನನ್ನ ವರ್ಣನೆ ಮಾಡಿದ ಹಾಗೇನೇ. ಆದರೆ ಆಗ ಅವರು ಮೂರ್ಖ ಅಂತ ಬೈದಿದ್ದರೆ ನಾನು ಅಮ್ಮನ ಹತ್ತಿರ ಅಳ್ತಾ ಹೇಳಿದ್ದರೆ, ಮೇಷ್ಟ್ರಿಗೆ ಮನೇಲಿ ಪಾಠಹೇಳಿಕೊಡೋ ಕೆಲಸ ತಪ್ಪಿ ಶ್ರೀಮಂತ ಅಪ್ಪನ ಕೈಲಿ ಬೈಯಿಸಿಕೊಳ್ಳಲೂ ಬೇಕಾಗಿತ್ತು! ಕೆಲಸವನ್ನು ಕಳೆದುಕೊಳ್ಳುತ್ತಿದ್ದರು !!

ಅಸಲಿನ ಮೊಮ್ಮಗನೇ ಅಂತ ರಾಜಕಾರಣಿಯನ್ನು ಉದ್ದೇಶಿಸಿದರೆ ಅವನಿಗೆ ಹೇಳಿದಾಗಂತೂ ಅರ್ಥವಾಗುಲ್ಲ. ನಮ್ಮ ಸೇಡೂ ತೀರುತ್ತೆ ಅಲ್ಲವೇ ? ಅವನ ಲಂಚ ಋಷುವತ್ತನ್ನು ಬಣ್ಣಿಸಿದ ಹಾಗಾಗುತ್ತೆ ಅಲ್ಲವೇ ?

" ಸಾತಕ್ಕ ನಿಮ್ಮ ಮೂರನೆ ಮಗಳು ರಷ್ಯದ ಮಹಿಳೆಯರಂತೆ ಇದಾರೆ ಅಂದ್ರೇ "

" ನಿಮ್ಮ ಕುಮಾರ ಡಾಕ್ಟರ ತರಹ ಸ್ಫುಟವಾಗಿ ಬರೀತಾನೆ ರಾಯರೆ "

" ಕಾಮಿನಿಕುಮಾರಿ ಭರತನಾಟ್ಯವಾಡಿದಾಗ ಕಥಕಳಿ ಕುಣಿದ ಹಾಗೆ ಇರುತ್ತೆ " ಈ ರೀತಿ ಅಂದರೆ ಕೇಳಿದ ತಂದೆತಾಯಿಯರಿಗೆ " ಪೆಪ್ಪರಮೆಂಟ್ ಗಳಕ್ " ಅಲ್ಲವೇ ?

ಸ್ವಾಮಿ ! ಸಂಪಾದಕರೇ ! ಮೊನ್ನೆ ಕಾರವಾರಕ್ಕೆ ಹೋಗಿದ್ದಾಗ ಒಬ್ಬರ ಬೆಟ್ಟಿಯಾದೆ. ನಿಮ್ಮ ಹಾಗೇ ಇದ್ರು ! ಏನು ಆಶ್ಚರ್ಯ ಅಂತೀರಿ ! ನಿಮ್ಮಷ್ಟೇ ಅಡ್ಡಗಲ, ನಿಮ್ಮದೇ ಬಣ್ಣ. ನಿಮ್ಮದೇ ತೂಕ, ನಿಮ್ಮ ಖಾಲಿ ತಲೆಯೇ ! ಅಲ್ಲ ಅಲ್ಲ ಅಂದರೆ ಬಟ್ಟ ತಲೆಯೇ ಅವರದು. ಎರಡು ನಿಮಿಷ ಮಾತಾಡ್ದೆ ಅವರೆಂಥಾ ಗುಲ್ಡು " ಅಂತೀರಿ !

ಎ. ಆರ್. ವಿ. ರಾವ್

ಅಂತ ಬರೆದು " ಕ್ಷಮ್ಸಿ " ಅಂತ ಬರೆಯದೆ ಇದ್ದರೆ ಈ ಲೇಖನ ಪ್ರಕಟ ವಾಗುಲ್ಲ ಅಂತ ಅಂದುಕೊಂಡು ಕ್ಷಮಾಪಣೆ ಕೇಳಿದ್ದಾರೆ ಲೇಖಕರು, ಕಂಕುಳಲ್ಲಿ ಹಿಡಿದು ಕೈಯಲ್ಲಿ ಶರಣಾರ್ತಿ ಹಾಕುತ್ತಾ. (ಸಂ)

ವಾಗ್ಯುಗದಲ್ಲಿ ಸಭೆ, ಸಮ್ಮೇಳನಗಳು

ಸಭೆ ಸಮ್ಮೇಳನಗಳಾವುದಕ್ಕೂ ಹೋಗಿಲ್ಲವೆಂಬ ವ್ಯಥೆ ಬೇಡ—
ಅವುಗಳ ಸಾಮಾನ್ಯ ಸ್ಪಷ್ಟಚಿತ್ರ ಇಲ್ಲಿದೆ!

ಮನುಷ್ಯನ ನಾಗರಿಕತೆಯಲ್ಲಿ ವಿವಿಧ ಹೆಜ್ಜೆಗಳನ್ನು ಗುರುತಿಸುತ್ತ, ಅವುಗಳ ಮುಖ್ಯ ಲಕ್ಷಣಗಳನ್ನು ಸೂಚಿಸುವುದಕ್ಕೆ ಹಿಂದಿನಿಂದಲೂ ಕೆಲವೊಂದು ಹೆಸರುಗಳನ್ನು ಬಳಸಿ ಬಂದಿದ್ದಾರೆ. ಶಿಲಾಯುಗ, ಕಂಚಿನ ಯುಗ, ಕಬ್ಬಿಣದ ಯುಗ—ಎಂಬವು ಪುರಾತನ ನಾಗರಿಕತೆಯ ಹಳೆಯ ಮೈಲುಗಲ್ಲುಗಳು. ಪುರಾತನರು ಜೀವನ ನಡೆಸುವುದಕ್ಕೆ ಕಲ್ಲನ್ನು ಉಪಯೋಗಿಸಿದರು; ಕಂಚನ್ನೂ ಉಪಯೋಗಿಸಿದರು; ಕಬ್ಬಿಣವನ್ನು ಕಂಡುಹಿಡಿದರು—ಎಂದೇ ಈ ಶಬ್ದಗಳು ಹೇಳುತ್ತವೆ. ನಮ್ಮದು ಇನ್ನೂ ಕಬ್ಬಿಣದ ಯುಗವೇ. ಈ ಕಬ್ಬಿಣ ಕಮ್ಮಾರನ ಕುಲುಮೆಯಲ್ಲಿ ನಿರ್ಮಾಣವಾಗುವ ಬದಲು, ಬೃಹತ್ ಹೆಗ್ಗುಲುಮೆಗಳಲ್ಲಿ ತಯಾರಾಗುತ್ತಿರಬಹುದು. ಯೂರೋಪಿನಲ್ಲಿ ಮೊನ್ನೆ ತಾನೇ ಸರಿದು ಹೋದ ಶತಮಾನಗಳನ್ನು ಕರೆಯುವಾಗ ಯಂತ್ರಯುಗ, ಉದ್ಯಮಯುಗ—ಎಂದು ಕರೆದಿದ್ದಾರೆ. ಒಬ್ಬ ಮನುಷ್ಯನನ್ನು ಇನ್ನೊಬ್ಬ ಕೊಲ್ಲುವುದಕ್ಕೆ ಕಲ್ಲನ್ನೆಸೆದರೆ-ಅದು ಶಿಲಾಯುಗವಾಯಿತು. ಆಮೇಲೆ ಫಿರಂಗಿ ಯುಗ ಬಂದಿತು, ಅದೂ ಹಳೆತಾಗಿ ಈಗ ರಾಕೆಟ್ಟುಗಳ ಯುಗ ಬಂದಿದೆ. ರಾಕೆಟ್ಟುಗಳ ಮೊನೆಯಲ್ಲಿ ಪರಮಾಣುಶಕ್ತಿಯೂ ಸೇರಿಕೊಂಡಿದೆ. ಇಂದಿನ ಯುಗವನ್ನು 'ಖಂಡಾಂತರ ಮಿಸೈಲ್ ಯುಗ' ಎನ್ನೋಣ. ಇದೆಲ್ಲ ಯಾರಿಗೆ ಹೇಳಿದ್ದು? ಕೇವಲ ಭೌತ ಜೀವನದಲ್ಲಿ ಮುಳುಗಿದ ಪಾಶ್ಚಾತ್ಯರಿಗೆ.

ಭಾರತ ದೇಶವು ಇದಕ್ಕೆ ಆಕ್ಷೇಪ. ಅದಕ್ಕೆ ಲೌಕಿಕ ವಿಚಾರದಲ್ಲಿ ಆಸಕ್ತಿಯೇ ಇಲ್ಲ. ಪಾರಮಾರ್ಥದಲ್ಲಿ ಅಭಿರುಚಿ ಕಡಿಮೆಯಾದರೂ, ಲೌಕಿಕಕ್ಕೆ ಪ್ರಾಶಸ್ತ್ಯವಿಲ್ಲದಿರುವುದು ನಿಜವಷ್ಟೆ. ಹಾಗಿದ್ದ ಮೇಲೆ, ಬಿಲ್ಲು ಬಾಣ, ಕಂಚು, ಕಬ್ಬಿಣ, ರಾಕೆಟ್ಟು, ಮಿಸೈಲು—ಇವುಗಳ ಯುಗವನ್ನು ನಾವು ಬರಮಾಡಿಕೊಂಡೇವೆಯೇ? ಅದು ಕೇವಲ ನಮ್ಮ ಅಧಃಪತನದ ಚಿಹ್ನೆಯಾದೀತು. ನಮ್ಮ ಸಂಸ್ಕಾರಕ್ಕೆ ತಕ್ಕಂತೆ, ಧ್ಯೇಯವನ್ನು ತಕ್ಕಂತೆ, ಭರತಖಂಡದಲ್ಲಿ ಈಗ ಯಾವ ಯುಗ ನಡೆಯುತ್ತಿದೆ ಎಂದು ಕೇಳಿದರೆ, ಏನೆನ್ನುತ್ತೀರಿ? ನಿಮ್ಮ ಮನೆಯ ಮುದುಕಿಯರ ಹಾಗೆ ಕೃತ, ತ್ರೇತ, ದ್ವಾಪರ ಕಳೆದು ಕಲಿಯುಗ ಬಂದಿದೆ ಅನ್ನುತ್ತೀರಾ? ಇದು ನಿಮ್ಮ ಗೌರವಕ್ಕೆ ತಕ್ಕದ್ದೇ? ನೀವೇ ವಿಚಾರಮಾಡಿ. ಈ ಕಾಲಕ್ಕೆ ಒಪ್ಪುವ ಒಂದು ಹೆಸರನ್ನು ನಮ್ಮ ಹಿಂದಿನವರು ನಮಗೆ ಕೊಡಬೇಕಾಗಿ ಬಂತೇನು? ಅವರ

ಕಾಲಕ್ಕೆ ಅವರು ಬೇಕಾದ ಹೆಸರಿಟ್ಟುಕೊಳ್ಳಲಿ. ನಮ್ಮ ಕಾಲಕ್ಕೆ ತಕ್ಕ ಹೆಸರನ್ನು ನಾವಿಡಬೇಡವೇ? ನಮ್ಮ ಪಟ್ಟಣದಲ್ಲಿ ರಸ್ತೆಗಳಿಗೆ ಏನು ಹೆಸರಿಟ್ಟಿದ್ದೇವೆ? ಆಂಜನೇಯನ ಬೀದಿ, ಬುಳ್ಳಪ್ಪನ ಓಣಿ, ಬೊಬ್ಬಯ್ಯನ ಓಣಿ—ಇಂಥ ಹೆಸರುಗಳಿವೆ. ಈ ಕಾಲಕ್ಕೆ ಹಳೆಯ ಹೆಸರುಗಳು ಬೇಡವೆಂದು ಅದೇ 'ಬುಳ್ಳಪ್ಪನ ಬೀದಿ'ಯನ್ನು 'ಸುಭಾಶ್ ರೋಡ್' ಎಂದೋ, ಊರಿನ ಬರಡು ಗೋಚರಾವನ್ನು 'ಮಹಾತ್ಮಾ ಗಾಂಧಿ ಮೈದಾನ್' ಎಂದೋ ಹೆಸರು ಬದಲಿಸಲಿಲ್ಲವೇ? ಬದಲಿಸಿದರೆ ತಪ್ಪೇ? ತಪ್ಪು–ಹೆಸರನ್ನು ಬದಲಿಸಿದ್ದರಿಂದಲ್ಲ; ಕಾಲಕ್ಕೆ ತಕ್ಕ ಹೆಸರು ಬೇಕೇಬೇಕು. ಗಾಂಧಿಯವರೂ, ಸುಭಾಶರೂ ಸತ್ತು ಅಷ್ಟೆಲ್ಲ ದಿವಸಗಳಾದರೂ–ಇನ್ನೂ, ಇನ್ನೂ ಅದೇ ಹೆಸರಿನಿಂದ ಆ ರಸ್ತೆ ಮತ್ತು ಮೈದಾನಗಳನ್ನು ಕರೆಯುವುದು ಮಾತ್ರ ಆಧುನಿಕತೆಯಲ್ಲ; ಅದಾದರೆ ತಪ್ಪು.

ಹಾಗಿದ್ದರೆ ಭಾರತದಲ್ಲಿ ಈಗ ನಡೆಯುವ ಯುಗ ಯಾವುದೆಂಬ ಪ್ರಶ್ನೆ ಬಂದೇ ಬರುತ್ತದೆ. ಅನ್ವರ್ಥವಾದ ಒಂದು ಹೆಸರು ಬೇಡವೇ ಅದಕ್ಕೆ? ಬೇಕಲ್ಲ! ಭಾರತದ ಅತ್ಯಂತ ವೈಭವದ ಕಾಲವೆಂಬುದು ಉಪನಿಷತ್ತುಗಳ ಕಾಲ. ಆಗ ನಾಡಿನ ಎಲ್ಲೆಲ್ಲಿಯೂ ಜನರು ಋಷಿಗಳಂತೆ ಇಲ್ಲವೆ, ಮರಗಳಂತೆ ಮೌನವಾಗಿ ಕೇವಲ ಧ್ಯಾನಾಸಕ್ತರಾಗಿದ್ದರು. ಅಂದರೇನು? ಅಂದಿನದು ಮನೋಯುಗವಾಗಿತ್ತು. ಆ ಮೌನಿಗಳ ಮನಸ್ಸಿನೊಳಗೆ ಎಷ್ಟೆಲ್ಲ ಅಭೇದ್ಯವಾದ ರಹಸ್ಯಗಳು ಅಡಗಿದ್ದುವು–ಎಂದು ತಿಳಿಯುವುದಕ್ಕೆ ಇನ್ನೆಷ್ಟು ಕಾಲ ಬೇಕೋ, ಏನೋ. ಆ ಕಾಲದ ಬಳಿಕ ಮೌನಿಗಳಿಂದ ಮುನಿಗಳಲ್ಲದವರು ತಿಳಿದುಕೊಂಡ ತಿಳಿವಿಗೆ, ತಂತಮ್ಮ ಕಲ್ಪನೆಯ ಅಚ್ಚುಗಳನ್ನೊತ್ತಿ, ಅಸಂಖ್ಯ ಪುರಾಣಗಳನ್ನು ಬರೆದರಷ್ಟೆ. ಅದು ಪುರಾಣಯುಗವಾಯಿತು. ನಮ್ಮ ಈ ಕಾಲ ಅದಕ್ಕೂ ಮುಂದುವರಿದಿದೆ. ಲೋಕ ಚೈತನ್ಯಕ್ಕೆ ೩ ಮುಖಗಳಿವೆ. ಅದೇ ಮನೋವಾಕ್ಕಾಯಗಳೆಂಬ ೩ ಕರಣಗಳು! 'ಕಾಯ' ಇಲ್ಲವೆ ತತ್ಸಂಬಂಧವಾದ ಕಾರ್ಯ ಎಂಬುದು ಮನುಷ್ಯನನ್ನು ಲೌಕಿಕಕ್ಕೆ ಎಳೆಯುವ ಶಕ್ತಿ. ಅದು ಖಂಡಿತಕ್ಕೂ ಪಾರಮಾರ್ಥಿಗಳಾದ ನಮಗೆ ಬೇಡ. ಇತ್ತ ನಾವು ಮೌನಯುಗವನ್ನು ದಾಟಿ ಬಂದಿದ್ದೇವೆ. ಸುಮ್ಮಗೆ ಕುಳಿತಿರಬೇಕೆನ್ನುತ್ತೀರಾ? ಅಥವಾ ಬರೆದ ಪುರಾಣಗಳನ್ನೇ ಓದುವವರಿಲ್ಲದಾಗ, ಇನ್ನಷ್ಟು ಪುರಾಣ ಬರೆಯಬೇಕೆನ್ನುತ್ತೀರಾ? ಆ ಸ್ಥಿತಿಯನ್ನು ನಾವು ದಾಟಬೇಕಾಯಿತು. ಅದಕ್ಕಾಗಿ ನಾವಿಂದು ನಮ್ಮ ಯುಗವನ್ನು 'ವಾಗ್ಯುಗ'ವೆಂದು ತಿಳಿದು, ಅದರಂತೆ ವರ್ತಿಸುತ್ತಿದ್ದೇವೆ. ಈ ಯುಗದಲ್ಲಿ ಮಾತೇ ಮುಖ್ಯ; ಅದೇ ನಮ್ಮ ಆಯುಧ; ಅದೇ ನಮ್ಮ ಕೆಲಸ. ಹಾಗೆಂದರೆ ಹಳೆಯ ಪುರಾಣಿಕರಂತೆ, ಪುಸ್ತಕ ಬರೆಯುತ್ತ ಕುಳಿತಿರುವುದಲ್ಲ. ನೀವು ಬರೆದದ್ದನ್ನು ಇನ್ನೊಬ್ಬ ಓದುತ್ತಾನೆಯೋ ಇಲ್ಲವೋ—ಎಂಬ ಅನುಮಾನವಿರುವಾಗ ಬರೆದು ಕಾಗದ ಹಾಳುಮಾಡಬೇಕಾದುದಿಲ್ಲ. ಅಲ್ಲದೆ ಬರೆಯುವ ಕ್ರಮವೂ ಅಷ್ಟೊಂದು ಉಚಿತವಾದುದಲ್ಲ. ಬರೆದ ಮೇಲೆ, 'ಒಮ್ಮೆ

ಓದಿ ನೋಡೋಣ' ಎಂಬ ಚಪಲ ಹುಟ್ಟುತ್ತದೆ. ಆಗ ನೀವು ಬರೆದದ್ದು ಸ್ವಲ್ಪ ಹೊತ್ತಿನ ಬಳಿಕ ನಿಮಗೇ ಅರ್ಥವಾಗದೆ ಹೋಗಬಹುದು; ತಪ್ಪೆಂದು ತೋರಲೂ ಬಹುದು. ಆಗ ಅದನ್ನು ತಿದ್ದಬೇಕು, ತಿರುಗಿ ಬರೆದರೆ, ತಿರುಗಿ ಓದಿ, ತಿರುಗಿ ತಿದ್ದಬೇಕು! ಇದಕ್ಕೇ ಆಯಿತು ನಿಮ್ಮ ಆಯುಷ್ಯ! ಆದುದರಿಂದ ಯಾವನೊಬ್ಬ ವಾಗ್ಭಟನೂ ಬರೆಯುವುದಕ್ಕೆ ಹೋಗಬಾರದು. ಮಾತಿನಿಂದ ಕೊರೆಯಬೇಕಾದುದು ಅವನ ಧರ್ಮ. ಮಾತನಾಡುವುದೆಂಬುದು–ಇನ್ನೊಬ್ಬರು ಕೇಳುವುದಕ್ಕೆ. ನಮ್ಮ ಕನಸಿನಲ್ಲಿ ಕೂಡಾ, ನಾವೇ ಕೇಳುವುದಕ್ಕಾಗಿ ನಾವು ಮಾತನಾಡುವುದಿಲ್ಲ. ಲೋಕದ ಕಿವಿ ಅದನ್ನು ಆಲಿಸಬೇಕು. ಆ ಲೋಕ ಎಷ್ಟು ದೊಡ್ಡದಾಗುತ್ತದೋ, ಮಾತನಾಡುವವನ ಘನಸ್ತಿಕೆ ಅಷ್ಟಷ್ಟು ಹೆಚ್ಚುತ್ತದೆ. ಅದಕ್ಕಾಗಿಯೇ ವಾಗ್ಯುಗಕ್ಕೆ ಬೇಕಾದ ಒಂದು ಮುಖ್ಯ ಏರ್ಪಾಟೇ ಸಭೆ, ಸಮ್ಮೇಳನ. ಈ ಯುಗದಲ್ಲಿ ಇವು ಎಷ್ಟೆಷ್ಟು ಹೆಚ್ಚಾಗಿ ನಡೆಯುತ್ತೇವೆಯೋ ಅಷ್ಟಷ್ಟು ಮುನ್ನಡೆ ಕಾಣಿಸಲೇಬೇಕು. ಮಾತನಾಡುವವ ಮುಂದುವರಿಸಬೇಕಾದರೆ, ಹಿಂದೆ ಏನು ನುಡಿದೆನೆಂದು ಯೋಚಿಸಿದರೆ ತೊಡಕು ಬರುತ್ತದೆಂಬುದು ಅನುಭವಸಿದ್ಧ ವಿಷಯ. ಅವನದು ಬರಿಯ ಮುನ್ನಡೆ............ಹಿನ್ನಡೆ ಇಲ್ಲವೇ ಇಲ್ಲ; ಅದು ಕೂಡದು.

ನೋಡಿ, ಸಭೆ-ಸಮ್ಮೇಳನ ಎಂದು ನಾನು ಬೀಜಗಣಿತದಲ್ಲಿ x, y ಎಂಬಂತೆ ಸಾಂಕೇತಿಕವಾಗಿ ಹೇಳಿದೆ. ಆ x ಯಾವುದು? y ಯಾವುದು? ಅವು ಯಾವ ಮೇಳದಲ್ಲಿ ಕೂಡುತ್ತವೆ? ಅವು ಕೂಡುವ ಕ್ರಮವೇನು—ಎಂಬುದನ್ನು ನೀವು ಯೋಚಿಸಬೇಡವೇ? ಬರಿಯ 'ಸಮ್ಮೇಳನ' 'ಸಭೆ' ಎಂದರೆ ಆಗುತ್ತದೆಯೇ? ಅದಕ್ಕೆ ಲೋಕವೇ ಕಿವಿಗೊಡಬೇಡವೇ? ಆ ಲೋಕ ಎಷ್ಟು ದೊಡ್ಡದಿರಬೇಕು— ಎಂಬುದನ್ನು ವಿಚಾರಮಾಡಬೇಕು. ಹಾಗಾಗಿ ಅದರ ವ್ಯಾಪ್ತಿಯನ್ನು ವಿಸ್ತರಿಸಬೇಕು. ನೀವು ಜರಗಿಸುವ ಸಮ್ಮೇಳನ ಎಲ್ಲಿಯೇ ಜರಗಲಿ; ಆ ವಿಚಾರ ಬೇರೆ. ಅದು ಕರೆದವರ ಹೊಣೆ; ಕರೆದು ಊಟದ ಏರ್ಪಾಟು ಮಾಡಿದವರ ಹೊಣೆ. ನೀವಾದರೂ ಒಂದು ಚಿಲ್ಲರೆ ಸಮ್ಮೇಳನದಲ್ಲಿ ಭಾಗವಹಿಸಲು ಇಷ್ಟಪಡುತ್ತೀರಾ? ಎಂದೂ ಇಲ್ಲ. ಲೋಕವೇ ನಿಮ್ಮನ್ನು ಕೇಳಬೇಕು. ಆದುದರಿಂದ ನೀವು ಕರೆಯಲು ಯೋಚಿಸಿರುವ ಸಮ್ಮೇಳನಕ್ಕೆ ಭವ್ಯನಾಮಾಂಕಿತ ಬೇಕೇ ಬೇಕು. 'ದಕ್ಷಿಣ ಕನ್ನಡ ಜಿಲ್ಲಾ' ಸಮ್ಮೇಳನ ಎನ್ನುತ್ತೀರಾ? ಆಕ್ಷೇಪ ಬರುತ್ತದೆ. ಈ ಜನ ಎಷ್ಟು ಸಣ್ಣ ಮನಸ್ಸಿನವರು ಎನ್ನುತ್ತಾರೆ! 'ಅಖಿಲ ಕರ್ನಾಟಕ ಸಮ್ಮೇಳನ' ಎನ್ನುತ್ತೀರಾ? ಅದಕ್ಕೂ ಆಕ್ಷೇಪವೇ. ನಿಮ್ಮ ಸ್ಫೂರ್ತಿ ಇಂಗ್ಲಿಷ್ ಭಾಷೆಯಲ್ಲಿದ್ದರೆ? 'ಅ-ಖಿಲ' ಎಂದು ಯಾರಾದರೂ ಆಕ್ಷೇಪ ಎತ್ತಿದರೆ? 'ಅಖಿಲ ಭಾರತ' ಎನ್ನುತ್ತೀರೋ? ಅದೂ ಸಣ್ಣ ಕ್ಷೇತ್ರವೇ. 'ಅಂತರ್ರಾಷ್ಟ್ರೀಯ ಹರಿಜನ ಸಮ್ಮೇಳನ' ಅನ್ನಿ. 'ಅಂತರ್ರಾಷ್ಟ್ರೀಯ ಸಾಂಸ್ಕೃತಿಕ ಸಮ್ಮೇಳನ' ಅನ್ನಿ. ಕಡಿಮೆ ಕಡಿಮೆ ಅಷ್ಟಾದರೂ ಅನ್ನಬೇಕು. 'ಅಂತರ್ರಾಷ್ಟ್ರೀಯ'ಕ್ಕೆ ಕಡಿಮೆಯಾದ ಅಳತೆ ಸ್ವಾಗತಾಧ್ಯಕ್ಷರಿಗೂ,

ಸಮ್ಮೇಳನಾಧ್ಯಕ್ಷರಿಗೂ, ಕಾರ್ಯದರ್ಶಿಗಳಿಗೂ ಗೌರವ ತರಲಾರದು. ಅಮೇರಿಕದ ಕ್ಷಿಪಣಿಗಳು ಸಿದ್ಧವಾದ ಮೇಲೆ, 'ಇಂಟರ್ ಸ್ಟೆಲ್ಲಾರ್' ಅರ್ಥಾತ್ 'ಅಂತರ್ ನಕ್ಷತ್ರೀಯ' ಗೊರಬುಧಾರಿಗಳ ಸಮ್ಮೇಳನವನ್ನು, 'ಅಂತರ್‌ನಕ್ಷತ್ರೀಯ ಮಜೂರ ಸಮ್ಮೇಳನ'ವನ್ನು ಕರೆದು ಕ್ಷೇತ್ರ ವಿಸ್ತರಿಸಲು ಸಾಧ್ಯವಿದೆ. ಆದರೆ ಗೊರಬು ಧರಿಸುವವರು ಯಾರು? ಮಜೂರರು ಯಾರು? ಇನ್ನೊಂದು ಯಾರು? ಎಂಬ ತೊಡಕುಗಳೂ ಇವೆ. ಮಾತನಾಡುವವರೂ, ಸಭೆಯ ಅಧ್ಯಕ್ಷತೆ ವಹಿಸುವವರೂ, ಅದನ್ನು ಕರೆಯುವವರೂ 'ನಾವು' ಎಂದಾದರೆ, ಆ ನಾವು 'ಗೊರಬು ಧರಿಸುತ್ತೀವೆಯೇ', ಆ ನಾವು 'ಮಜೂರರೇ' ಎಂಬ ಪ್ರಶ್ನೆ ಬರುತ್ತದೆ. ಆದರೆ ಅಂಥ ಕ್ಷುಲ್ಲಕ ವಿಚಾರಕ್ಕೆ ನೀವ್ಯಾರೂ ಗಮನ ಕೊಡಬೇಕಿಲ್ಲ. ಅಂತರ್‌ಭಾರತೀಯ ಹರಿಜನ ಸಮ್ಮೇಳನಕ್ಕೆ ಗಾಂಧೀಜಿ ಅಧ್ಯಕ್ಷರಾಗಿರಲಿಲ್ಲವೇ? ಅಂತರ್ ರಾಷ್ಟ್ರೀಯ ಮಹಿಳಾ ಸಮ್ಮೇಳನಕ್ಕೆ Mr. So and So ಎಂಬ ಗಂಡಸು ಅಧ್ಯಕ್ಷನಾಗಲಿಲ್ಲವೇ? ಅಂಚೆ ಪೇದೆಯರ ಸಮ್ಮೇಳನಕ್ಕೆ ಅನಂಚೆಯವರು ಅಧ್ಯಕ್ಷರಾಗಿಲ್ಲವೇ? ಮುಖ್ಯವಾಗಿ, ಯಾವುದೇ ಸಮ್ಮೇಳನಕ್ಕೆ ಕೀರ್ತಿ ಬರಬೇಕಾದರೆ, ಅದರ ಅಧ್ಯಕ್ಷ, ಕಾರ್ಯದರ್ಶಿ, ಸ್ವಾಗತಾಧ್ಯಕ್ಷ–ಕನಿಷ್ಠ ಈ ಮೂರು ಮಂದಿಯಾದರೂ ಆಯಾಯ ವೃತ್ತಿಗೆ, ಕುಲಕ್ಕೆ, ವ್ಯವಹಾರಕ್ಕೆ ಸಂಬಂಧಪಟ್ಟವರಿರಲೇ ಕೂಡದು. ಆಗ 'ಕೇವಲ ನಿಷ್ಪಕ್ಷಪಾತ' ದೃಷ್ಟಿಯಿಂದ ಭಾಷಣ ಮಾಡುವುದಕ್ಕೆ ಬರುತ್ತದೆ. ಸಮ್ಮೇಳನದ ವಿಷಯಕ್ಕೆ ಸಂಬಂಧಪಟ್ಟ ಪಕ್ಷಪಾತವಾಗಲಿ, ಪೂರ್ವತೀರ್ಮಾನವಾಗಲಿ ನಮ್ಮಲ್ಲಿ ಇರಲೇ ಕೂಡದು.

ಸಮ್ಮೇಳನ ಅಧ್ಯಕ್ಷತೆಗೆ ಅತ್ಯಂತ ಗಡುತರವಾದ ವಾಙ್ಮಿಯನ್ನೇ ನೀವು ಆರಿಸಬೇಕು. ಅದರ ಸ್ವಾಗತಾಧ್ಯಕ್ಷತೆಗೆ ನಿಮ್ಮ ದೇಶದ, ತಪ್ಪಿದರೆ ನಾಡಿನ, ತಪ್ಪಿದರೆ ನಗರದ, ತಪ್ಪಿದರೆ ನಿಮ್ಮ ಓಣಿಯ, ಇನ್ನೂ ತಪ್ಪಿದರೆ ನಿಮ್ಮ ಮನೆಯ ಗಡುತರವಾದ ವ್ಯಕ್ತಿಯನ್ನೇ ಆರಿಸಬೇಕು. ನಿಮ್ಮನ್ನು ಬಿಟ್ಟರೆ ಇನ್ನಾರಿಗೆ ಅಂಥ ಯೋಗ್ಯತೆಯಿದೆ. ಸಮ್ಮೇಳನದಲ್ಲಿ ಮೊದಲ ಭಾಷಣವೇ ಅವರದು. ಮುಂದಿನವರು ಹೇಳಬಹುದಾದುದನ್ನೆಲ್ಲ ಊಹಿಸಿ, ತಿಳಿದು ಸಮ್ಮೇಳನಾಧ್ಯಕ್ಷನ ಉಸಿರು ಕಟ್ಟಿಸುವ ಸಂದರ್ಭವನ್ನು ಸಾಧಿಸಿದರೆ ನಿಮಗೆ ಕೀರ್ತಿ ಬರುತ್ತದೆ. ತಾನೇನು ಮಾತನಾಡಬೇಕು–ಎಂಬ ಯೋಚನೆಗೀಡಾಗುವ ಯಾವೊಬ್ಬ ವ್ಯಕ್ತಿಯೂ, ಇಂಥ ಕೆಲಸಕ್ಕೆ ಅರ್ಹನಲ್ಲ. ಪ್ರಯೋಗಕ್ಕಾಗಿ ಒಂದು ಮಾದರಿ ಸಮ್ಮೇಳನ ನಡೆಸೋಣ. 'ಸಾಗರೋತ್ತರ ಮತ್ಸ್ಯವ್ಯವಸಾಯಿಗಳ ಮಹಾ ಸಮ್ಮೇಳನ' ಎಂದು ತಿಳಿಯಿರಿ. ಇದಕ್ಕೆ ಏನೇನು ಬೇಕು? ಅಧ್ಯಕ್ಷರೊಬ್ಬರಿದ್ದರೆ ಸಾಕೇ? ನಿಮ್ಮೂರಿನ ಮೀನಿನ ವಾಸನೆಗೆ ಅಥವಾ ಮತ್ಸ್ಯವ್ಯವಸಾಯಿಗಳ ಮೈವಾಸನೆಗೆ ಮೋಹಗೊಂಡು ಬರುವ ಜನರೆಲ್ಲರೂ ಬರಲಿ. ಅವರೆಲ್ಲರೂ ಶ್ರೋತಾರ್ಹರು; ಸಮ್ಮೇಳನ ನಡೆಯಬೇಕಾದರೆ ಮೊದಲು ಅದನ್ನು ಉದ್ಘಾಟಿಸುವವರು ಬೇಡವೇ? ಅದಕ್ಕೆ ಎಂಥವರು ಬೇಕು?

ಯೋಚಿಸಿ. ಅಂಥವರಿಗೂ ನಿಮಗೂ ಪೂರ್ವಪರಿಚಯವಿರುವುದು ಸಾಧ್ಯವೆ? ಅದೂ ಇಂಥ 'ಸಾಗರೋತ್ತರ' ವಿಚಾರದಲ್ಲಿ. ನೀವು ಆರಿಸುವ ಉದ್ಘಾಟಕರು ಒಂದು ಪುಟ್ಟ ತಿಮಿಂಗಿಲದಷ್ಟಾದರೂ ಇರಬೇಕು, ಒಂದು ಹುಲಿಮೀನಿನಂತಾದರೂ ಕಾಣಿಸಬೇಕು. ಅದೇ ಆಕಾರದ ವ್ಯಕ್ತಿ ಸಿಗದಿದ್ದರೆ, ಸ್ವಭಾವದಲ್ಲಾದರೂ ತಿಮಿಂಗಿಲ, ಶಾರ್ಕುಗಳ ಆಸ್ವಾದನಾಶಕ್ತಿಯುಳ್ಳವರಾಗಿರಬೇಕು. ಅವರು ಉಪನ್ಯಾಸ ಮಾಡಬೇಕಾದುದು ಮುಖ್ಯವಲ್ಲ. ನಿಮ್ಮ ಊರಿನ ಸೊಪ್ಪುಸದೆಗಳಿಂದ ನಿರ್ಮಿತವಾದ, ಕುಂಬಳಹೂ, ಸೂರ್ಯಕಾಂತಿ ಮೊದಲಾದ ದೊಡ್ಡ ಹೂಗಳಿಂದ ರಂಜಿತವಾದ ಹಾರಕ್ಕೆ ತಲೆಯೊಡ್ಡುವಷ್ಟು ದಪ್ಪವಾದ ಕತ್ತುಳ್ಳವನಾಗಿರಬೇಕು. ಸಭೆಯ ವೇದಿಕೆಯ ಮುಂದೆ ಕಟ್ಟಿದ, ಒಂದು ರೇಶ್ಮೆ ರಿಬ್ಬನನ್ನು ಕತ್ತರಿ ಹಿಡಿದು ತಿಣಿಕಿ, ತೀಡಿ ಐದು ಮಿನಿಟುಗಳ ಅವಧಿಯೊಳಗೆ ಕತ್ತರಿಸುವಷ್ಟು ದೇಹಶಕ್ತಿಯುಳ್ಳವನಾಗಬೇಕು. ಅಂಥ ವ್ಯಕ್ತಿಯನ್ನು ಕುಳ್ಳಿರಿಸುವುದಕ್ಕೆ–ಕಾಂಕ್ರೀಟಿನಿಂದ ರಚಿತವಾದ ಆಸನವು ಮೊದಲೇ ಸಿದ್ಧವಾಗಿರಬೇಕು. ಅಂಥ ಉದ್ಘಾಟಕನ ಜತೆಯಲ್ಲಿ, ತಿಮಿಂಗಿಲ ಶಾರ್ಕುಗಳಷ್ಟು ದೊಡ್ಡವನಲ್ಲವಾದರೂ, ಸಾಮಾನ್ಯ ಗಾತ್ರದ ಕಡಲಾಮೆಯಂತಿರುವ ಇನ್ನೊಬ್ಬನನ್ನು ನೀವು ಅಧ್ಯಕ್ಷನನ್ನಾಗಿ ಆರಿಸಬೇಕು. ಬೆದರಿದಾಗ ಆತ ಆಮೆಯಂತೆಯೇ ತನ್ನ ಅಂಗಿ, ಇಜಾರಗಳೊಳಕ್ಕೆ ಶರೀರವನ್ನು ಸೆಳೆದುಕೊಂಡಂತೆ ಕಾಣಿಸುವಂತಿರಬೇಕು. ಆತನ ಬಾಹ್ಯಾಕಾರ ಹೀಗಿದ್ದರೂ ನೀವು ರಾಜಧಾನಿಗೆ ಹೋದಾಗಲೋ, ವಿದೇಶಗಳಿಗೆ ಹೋದಾಗಲೋ, ನಿಮಗೆ ಕೃತಜ್ಞತೆಯಿಂದ ಆತಿಥ್ಯ ಸಲ್ಲಿಸಬಲ್ಲ ವ್ಯಕ್ತಿಯಾಗಿರಬೇಕು. ಆತ ಸಲ್ಲಿಸದೆ ಹೋದರೂ, ಆಮಂತ್ರಣ ಕೊಟ್ಟಾನೆಂಬ ಭರವಸೆಯಾದರೂ ನಿಮಗಿರಬೇಕು. ಅದಿಲ್ಲದವರನ್ನು ಸಮ್ಮೇಳನದ ಅಧ್ಯಕ್ಷತೆಗೆಎಂದೂ ಕರೆಯಿಸಬೇಡಿ. ಆತನಿಗೂ ಒಣಜಂಬ ಇರುತ್ತದೆ. ಸ್ವಾಗತಾಧ್ಯಕ್ಷರಾದ ನಿಮಗಿಂತಲೂ ಅವನು ಬುದ್ಧಿವಂತನಲ್ಲ. ನೀವೊಬ್ಬರೇ ಉದ್ಘಾಟನೆ, ಅಧ್ಯಕ್ಷತನ, ಸ್ವಾಗತ ಮೂರೂ ಕೆಲಸ ಮಾಡಲಾರದ್ದಕ್ಕೆ ಅವನನ್ನು ಕರೆಸಿಕೊಂಡಿದ್ದೀರಿ—ಅಷ್ಟೇ.

ಈಗ ಸ್ವಾಗತಾಧ್ಯಕ್ಷರ ಭಾಷಣವನ್ನು ಕುರಿತು, ಅದರಲ್ಲಿ ಬರಬೇಕಾದ ಕೆಲವೇ ವಿಷಯಗಳನ್ನು ಕುರಿತು ನಮ್ರತೆಯಿಂದ ಸೂಚಿಸಲು ಬಯಸುತ್ತೇನೆ. 'ಸಾಗರೋತ್ತರ' ಎಂದರೆ ಉತ್ತರ ಸಾಗರವೇ? ವಿಶಾಲ ಸಾಗರವೇ? ಅದರ ಆಳವೆಷ್ಟು? ವಿಸ್ತಾರವೆಷ್ಟು? ಅದು ಎಂದು ಸೃಷ್ಟಿಯಾಯಿತು, 'ಪ್ರತಿವರ್ಷವೂ ಸೆಕೆಗಾಲದಲ್ಲಿ ಅದರ ನೀರು ಆವಿಯಾಗಿ ಹೋದರೆ, ಅದರ ನೀರು ಇನ್ನೆಷ್ಟು ದಿವಸ ಉಳಿದೀತು' ಎಂಬ ಪ್ರಶ್ನೆಯಿಂದ ತೊಡಗಿ, 'ಸಾಗರಗಳ ನೀರು ಬತ್ತಿದ ಮೇಲೆ ಮತ್ಸ್ಯವ್ಯವಸಾಯಿಗಳ ಜೀವನ ಹೇಗೆ ಸಾಗಬೇಕು' ಎಂಬ ಸಮಸ್ಯೆಯನ್ನು ಅಧ್ಯಕ್ಷನ ಮುಸುಡಿಗೆ ಎಸೆಯಿರಿ. ದೇಶಕಲ್ಯಾಣಕ್ಕೆ, ಮತ್ಸ್ಯಕಲ್ಯಾಣ ಎಷ್ಟು ಅವಶ್ಯ–ಎಂದು ವಿವರಿಸಿ ಮತ್ಸ್ಯಗಳಿದ್ದರಲ್ಲವೇ ಮತ್ಸ್ಯವ್ಯವಸಾಯಿಗಳು ಬದುಕಬೇಕು? ಮತ್ಸ್ಯಸಮೃದ್ಧಿ

ಹೆಚ್ಚುವುದಕ್ಕೆ? ಏನೇನಾಗಬೇಕು ? ಸಾಗರಗಳಲ್ಲಿ ವಾಸಿಸುವ ಅಸಂಖ್ಯ ತಿಮಿಂಗಿಲ, ಶಾರ್ಕ್, ಹೆಮ್ಮೀನು ಮೊದಲಾದುವುಗಳಿಗೆ ತಕ್ಕಷ್ಟು ಆಹಾರ ಪೂರೈಕೆಯಾಗದಿದ್ದರೆ, ಅವಾದರೂ ಏನು ಮಾಡಬೇಕು ? ದೊಡ್ಡ ಮೀನು ಸಣ್ಣ ಮೀನುಗಳನ್ನು ತಿನ್ನುವುದನ್ನೂ, ತಿಂದು ಮುಂದಿನ ಸಂತಾನವನ್ನು ನಾಶಮಾಡುವುದನ್ನೂ ಹೇಗೆ ನಿಲ್ಲಿಸಬೇಕು ? ಸಾಗರಗಳ ವಿಸ್ತಾರ ಹೆಚ್ಚಿಸಬೇಡವೇ ? ಆಳ ಹೆಚ್ಚಿಸಬೇಡವೇ ? ದೊಡ್ಡ ಮೀನು ಸಣ್ಣಮೀನನ್ನು ತಿನ್ನುವುದನ್ನು ನಿಲ್ಲಿಸಲು ಸೀಲಿಂಗ್ ತರಬೇಡವೇ— ಎಂಬಿವೇ ಸಮಸ್ಯೆಗಳಿಂದ ಕೂಡಿದ ಉಪನ್ಯಾಸ ಪ್ರಾರಂಭಿಸಿ. ಅಂಥ ಮೀನುಗಳಿಂದ ಮತ್ಸ್ಯವ್ಯವಸಾಯಿಗಳಿಗೆ ಲಾಭವಾಗಬೇಕಾದರೆ, ಯಾವ ಸುಧಾರಿತ ಮಾರ್ಗ ಅವಶ್ಯ? ಬೆಳೆದು ಕೊಬ್ಬಿದ ಮೀನುಗಳು ತಾವಾಗಿಯೇ ದಂಡೆಗೆ ಬರುವುದಕ್ಕೆ ಏನು ಮಾಡಬೇಕು ? ತಿಮಿಂಗಿಲ ಹಿಡಿಯುವುದಕ್ಕೆ ಒಬ್ಬರಾದರೂ ಬಲೆ ನಿರ್ಮಿಸಿದ್ದಾರೆಯೇ ? ತಿಮಿಂಗಿಲ ಮತ್ಸ್ಯವ್ಯವಸಾಯಿಯ ಎಟುಕಿಗೆ ಸಿಗುವಂತೆ ಗಾಳಗಳನ್ನಾದರೂ ನಿರ್ಮಿಸಿದ್ದಾರೆಯೇ ? ಹೀಗೆ ಪ್ರಶ್ನೆಗಳ ಹಿಂದೆ ಪ್ರಶ್ನೆಗಳನ್ನು ಕೊಕ್ಕೆಕೊಕ್ಕೆಯಾಗಿ ಸಿಕ್ಕಿಸಿ ಕೇಳುತ್ತಲೇ ಹೋಗಿ. ಖಂಡಿತಕ್ಕೂ ನಿಮ್ಮ ಸಮ್ಮೇಳನಾಧ್ಯಕ್ಷ, ತನ್ನ ಕಾರ್ಯದರ್ಶಿಯಿಂದ ಬರೆಯಿಸಿ ತಂದ ಉಪನ್ಯಾಸದಲ್ಲಿ, ಇಂಥ ಒಂದೇ ಒಂದು ಸಮಸ್ಯೆಯನ್ನೂ ಸೂಚಿಸಿರುವುದಿಲ್ಲ. ನೀವೆಷ್ಟು ಧಾರಾಳಮತಿಗಳೋ ಆತ ಅಷ್ಟೇ ಅಲ್ಪಮತಿ. (ಹಾಗಿರುವಂತೆ-ಸಮುದ್ರ ನೋಡದವನನ್ನೇ ಆರಿಸಿ.)

ಇನ್ನೂ ಪ್ರಶ್ನೆಗಳನ್ನು ಕೇಳಿ. ಸಾಗರದ ಬಿರುಗಾಳಿಗಳನ್ನು ತಪ್ಪಿಸಿ, ಬೆಸ್ತರು ಸುರಕ್ಷಿತ ಮೀನುಗಾರಿಕೆ ನಡೆಯಿಸುವುದಕ್ಕೆ ನೀವೇನು ಮಾಡುತ್ತೀರಿ—ಎಂಬ ಪ್ರಶ್ನೆ ಹಾಕಿ. ಸಾಗರದ ನೀರಿನಲ್ಲಿ ಚಿನ್ನ ಇದೆಯೆಂಬುದು ಗೊತ್ತೇ—ಎಂದು ಕೇಳಿ. ಆ ವಿಚಾರದ ಅಂಕೆ ಸಂಖ್ಯೆ ತಿಳಿಸಿ ; ಅಷ್ಟೆಲ್ಲ ಅಗ್ಗದ ಚಿನ್ನ ಸಾಗರದಲ್ಲಿ ಹುದುಗಿರುವಾಗ, ದೇಶದ ಸಾಲ ಹೆಚ್ಚಿಸುತ್ತೀರಿ ಏಕೆ ? ತಿರಿಗಿ ಹೆಚ್ಚಿಸುತ್ತೀರಿ ಏಕೆ—ಎಂಬ ರಾಮಬಾಣವನ್ನು ಬಿಡಿ. ಖಂಡಿತಕ್ಕೂ ಹೇಳುತ್ತೇನೆ. ನಿಮ್ಮ ಈ ದೀರ್ಘೋಪನ್ಯಾಸವನ್ನು ಲೋಕದ ಮೇಲಿನ ಕರುಣೆಯಿಂದ ನಿಲ್ಲಿಸುವಾಗ, ಉದ್ಘಾಟಕ ಕುಳಿತಲ್ಲಿಯೇ ನಿದ್ರೆ ಮಾಡಿರುತ್ತಾನೆ. ತನ್ನದು ಮಾತಿನ ಮುಂದಿನ ಸರದಿ ಎಂದು ಗೊತ್ತಿರುವ ಅಧ್ಯಕ್ಷ ಜಾಕೇಟಿನ ಒಳಗಡೆ ಕಂಪಿಸುತ್ತಿರುತ್ತಾನೆ. ಆದರೂ ಭಾಷಣಕ್ಕೆ ನಿಲ್ಲುತ್ತಾನೆ. ನೀವು ಕೊಟ್ಟ ಹಾರಕ್ಕೆ ತಲೆಯೊಡ್ಡುತ್ತಾನೆ. ಮೈಮರೆತು ತನಗೆ ತಾನೇ ಚಪ್ಪಾಳೆ ಹೊಡೆಯುತ್ತಾನೆ. ' ಮಹಿಳೆಯರೇ, [ಯಾರೂ ಬಂದಿರುವುದಿಲ್ಲ] ಮಹನೀಯರೇ, ಮಿತ್ರರೇ ' ಎನ್ನುತ್ತಾನೆ. ಅಲ್ಲಿ ಬಂದಿರುವ ' ಮಹಿಳೆಯರೂ, ಮಹನೀಯರೂ ' ಅವನ ಮಿತ್ರರಿಂದ ಬೇರೆಯಾದವರು-ಎಂದು ಸ್ಪಷ್ಟವಾಗಿ ತಿಳಿಸಿ, ತನ್ನ ಅಜ್ಞಾನ ಪ್ರದರ್ಶಿಸುತ್ತಾನೆ. ಮುಂದೆ ಅವನ ಉಪನ್ಯಾಸದ ವಿಷಯ ಹೇಳಲೇಬೇಕಾಗಿಲ್ಲ. ಅವನು ಸಾಗರವನ್ನು ಕಂಡದ್ದು ಎಟ್ಲಾಸಿನಲ್ಲಿ. ಅದರ ನೀರು ಉಪ್ಪಾಗಿರುವುದೂ ಅವನಿಗೆ ಗೊತ್ತಿಲ್ಲ. ತನ್ನ ಕಾರ್ಯದರ್ಶಿ ಬರೆದುಕೊಟ್ಟ

ಪ್ರಬಂಧವನ್ನು ಪ್ರಥಮಬಾರಿಗೆ ಆತ ನೋಡಿ ಸಭೆಯ ಮುಂದೆ ಓದುತ್ತಾನೆ. ಅಲ್ಪಪ್ರಾಣಕ್ಕೆ ಮಹಾಪ್ರಾಣ, ಮಹಾಪ್ರಾಣಕ್ಕೆ ಅಲ್ಪಪ್ರಾಣ ಉಪಯೋಗಿಸುತ್ತಾನೆ. ಕನ್ನಡವನ್ನು ಇಂಗ್ಲಿಷಿನಂತೆ ಉಚ್ಚರಿಸುತ್ತಾನೆ. ಆಮೇಲೆ ವಿಷಯವೋ, ಅವನು ಬರೆದುಕೊಂಡದ್ದನ್ನು ಓದುವ ಮೊದಲೇ, ನೀವು ಊಹಿಸಬಹುದು. "ನಾವೆಲ್ಲರೂ ಭಾರತೀಯರು; ನಮ್ಮ ಸಂಸ್ಕೃತಿ, ನಮ್ಮ ದೇಶ ಬಹು ದೊಡ್ಡದು, ಪುರಾತನದ್ದು" ಎನ್ನುತ್ತಾನೆ. ಅದು ನಿಮಗೆ ಗೊತ್ತಿಲ್ಲವೇ? ಇವನು ಹೇಳಬೇಕೇ? ಅನಂತರ ದೇಶಕಲ್ಯಾಣದ ಪೈಂಟುಗಳನ್ನು ಒಂದೊಂದಾಗಿ ಬಿಡಿಸುತ್ತಾನೆ. ಒಬ್ಬೊಬ್ಬ ಮನೆಯವನು ಒಂದೊಂದು ಬಾವಿಯಲ್ಲಿ ದಿನಕ್ಕೆ ಒಂದೊಂದೇ ಮೀನನ್ನು ಬೆಳೆದರೆ, ಅಖಿಲಭಾರತದಲ್ಲಿ ಒಂದೇ ದಿನಕ್ಕೆ ಮೂವತ್ತೈದುಕೋಟಿ ಮೀನು ಬೆಳೆಯುತ್ತದೆ— ಎನ್ನುತ್ತಾನೆ. 'ನಿಮ್ಮ ಬಿಡುಸಮಯದಲ್ಲಿ ರಾತ್ರಿ ಒಂದು ತಟ್ಟೆಯಲ್ಲಿ ನೀರನ್ನು ಹಾಕಿ ಬೆಳಗಿನ ತನಕವೂ ಮೀನನ್ನು ಬೆಳೆದರೆ ಇಂತಿಷ್ಟು ಉಳಿತಾಯವಾಗುತ್ತದೆ' ಎಂದು ಬುರುಡೆ ಬಿಡುತ್ತಾನೆ. ಮತ್ಸ್ಯ ಮಾರುವುದಕ್ಕೆ ಹೊರಟ ನಿಮ್ಮ ಮುಂದೆ, ಮೀನು ಕೊಳ್ಳುವುದಕ್ಕೆ ಜನ ಉಳಿಯಬಾರದು ಎಂಬ ದಾರಿ ಅವನದ್ದು. ಅವನ ಪಾಲಿಗೆ ಕೊಳಕ್ಕಿಂತಲೂ ದೊಡ್ಡ ಜಲಪಾತ್ರೆಯಿಲ್ಲ. ನಯಾಪೈಸೆಗಿಂತಲೂ ದೊಡ್ಡ ಮೀನೇ ಇಲ್ಲ. ಸ್ವಾಗತಾಧ್ಯಕ್ಷರಾದ ನೀವು ಸಾಗರದಿಂದ ಸಭೆಯ ಮೇಲೆ ಎತ್ತಿ ಹಾರಿಸಿದ ತಿಮಿಂಗಿಲ ಎಷ್ಟು ದೊಡ್ಡದಿರಬಹುದು! ಅದರ ತೂಕ ಎಷ್ಟು ಎಂಬ ಒಂದಿಷ್ಟಾದರೂ ಜ್ಞಾನ ಅಧ್ಯಕ್ಷನಿಗೆ ಇರಬೇಡವೇ? ಅದಕ್ಕಾಗಿಯೇ, ಅವನು ಆರಂಭದಲ್ಲಿಯೇ ಅತ್ಯಂತ ವಿನಮ್ರನಾಗಿ 'ಮಹಿಳೆಯರೇ, ಮಹನೀಯರೇ' ಎಂದು ತೊಡಗಿ, 'ನಾನು ಅಜ್ಞ; ನನಗೆ ಈ ವಿಚಾರ ಹೆಚ್ಚು ತಿಳಿದಿಲ್ಲ, ನನ್ನನ್ನು ಅಧ್ಯಕ್ಷಪಟ್ಟಕ್ಕೆ ನೀವೇಕೆ ಆರಿಸಿದಿರೋ ತಿಳಿಯೆ. ಆದರೂ ನಿಮ್ಮ ಸೇವೆ ಮಾಡುವುದಕ್ಕೆ ಬಂದಿದ್ದೇನೆ. ನಾವೆಲ್ಲರೂ ರಾಷ್ಟ್ರಕಲ್ಯಾಣವನ್ನು ಸಾಧಿಸಬೇಕು' ಎಂದು ಪೂರ್ವಸೂಚನೆ ಕೊಡುತ್ತಾನೆ; ಅದಕ್ಕಾಗಿ ಬೇಸರಪಡಬೇಡಿ. ನಮ್ಮ ದೇಶದಲ್ಲಿ ಯಾವತ್ತೂ ಭಾಷಣಕಾರರು ಅದರಲ್ಲೂ ಸಮ್ಮೇಳನಾಧ್ಯಕ್ಷರು 'ವಿಷಯ ದೊಡ್ಡದು ನನಗೇನೂ ಗೊತ್ತಿಲ್ಲ' ಎಂದು ಹೇಳಿಯೇ, ನಾಲ್ಕು ಘಂಟೆ ಉಪನ್ಯಾಸ ಮಾಡುತ್ತಾರೆ. ಒಣಗಿದ ಮತ್ಸ್ಯದಂತಿರುವ ಈ ನಿಮ್ಮ ಅಧ್ಯಕ್ಷ ಬೇರೆ ಏನು ಮಾಡಿಯಾನು? ಅದಕ್ಕಾಗಿಯೇ ನಾನು ಹೇಳಿದ್ದು ಸ್ವಾಗತಾಧ್ಯಕ್ಷರ ಭಾಷಣ ಘನ ಗಂಭೀರವಾದರೆ ಆ ದಿವಸದ ಮಟ್ಟಿಗೆ ಇತರ ಯಾವ ತೊಂದರೆಯೂ ಬರಲಾರದು.

ಮರುದಿನ ಸಮ್ಮೇಳನದಲ್ಲಿ ನಡೆಯಬೇಕಾದ ಮಹಾಕೆಲಸಗಳೇನೂ ಇಲ್ಲ. ಬಂದ ಹೆಚ್ಚಿನ ಸದಸ್ಯರು ಊರಿಗೆ ಮರಳಿರುತ್ತಾರೆ. ಉಳಿದವರು ನಿಮ್ಮ ಊರನ್ನು ನೋಡುವುದಕ್ಕೆ ಹೋಗಿರುತ್ತಾರೆ. ಹೊರಗಿನವರು ಆರು ಜನರಿದ್ದಾರೆ, ಊರಿನ ನೂರು ಜನ ನೀವೇ ಇರುತ್ತೀರಿ. ಮಧ್ಯಾಹ್ನ ಮೂರು ಗಂಟೆಯ ಅಧಿವೇಶನವನ್ನು

ರಾತ್ರಿ ಎಂಟೋ ಒಂಬತ್ತೋ ಘಂಟೆಗೆ ತೊಡಗಿದರಾಯಿತು. ಅಲ್ಲಿಯು ತನಕ ಅಧ್ಯಕ್ಷಾದಿ ಪ್ರಮುಖರಿಗೆ ಟೀಪಾರ್ಟಿಗಳಿರುತ್ತದೆ. ಮಧ್ಯಾಹ್ನದ ಅಧಿವೇಶನ ರಾತ್ರಿಯ ಅಧಿವೇಶನವಾಗುತ್ತದೆ. ನೀವೇನೇ ಅದಕ್ಕೆ ನೂರಕ್ಕಿಂತ ಕಡಿಮೆಯಿಲ್ಲ ದಷ್ಟು ಠರಾವುಗಳನ್ನು ಬರೆಯಿಸಿ ಇಟ್ಟುಕೊಂಡಿರುತ್ತೀರಿ. ಅವನ್ನು ಓದುವುದಕ್ಕೆ ಆರು ಘಂಟೆ ಬೇಕು. ಎಲ್ಲವೂ 'anonymously passed' ಆಗುತ್ತವೆ. ಆದರೆ ಒಂದು ವಿಚಾರವನ್ನು ಮರೆತುಬಿಡಬೇಡಿ. ಸಮ್ಮೇಳನದ ಅವಸರದಲ್ಲಿ ನಿಮಗೆ ನಿಮ್ಮ ಊರಿನಲ್ಲಿ ನಡೆದ ಒಂದು ಅಕಾಲ ನಿಧನದ ವಿಚಾರ. ಮರೆತೇ ಹೋಗಿರಬೇಕು. ಆ ವಿಷಯವಾದ ನಿರ್ಣಯವನ್ನು ಅಥವಾ ಸಂತಾಪ ಸೂಚನೆ ಯನ್ನು ಸ್ವಾಗತಾಧ್ಯಕ್ಷರೇ ಸಭೆಯಲ್ಲಿ ಗಂಭೀರವಾಗಿ ಎದ್ದುನಿಂತು ಹೇಳಬೇಕು. ಮಹನೀಯರೇ, ಒಂದು ಸಂತಾಪದ ವಿಚಾರವನ್ನು ಹೇಳಬೇಕಾಗಿದೆ. ಈ ನಮ್ಮ ಸಮ್ಮೇಳನವನ್ನು ಜರಗಿಸುವುದಕ್ಕೆ ಆದಿಸ್ಫೂರ್ತಿಯನ್ನು ಕೊಟ್ಟ ವ್ಯಕ್ತಿಗಳನ್ನೂ ಅವರ ಅಕಾಲ ನಿಧನವನ್ನೂ ಕುರಿತು ನಾವು ಸ್ಮರಿಸಲೇಬೇಕಾಗಿದೆ. ನಮ್ಮೂರಿನಲ್ಲಿ ಪ್ರಸಿದ್ಧ ಸರೋವರವಾದ ಎಮ್ಮೆಗುಂಡಿ ಎಂಬ ಮಹಾ ಜಲಾಶಯವಿದೆ. ಈ ವರ್ಷ ಬೇಸಗೆಯಲ್ಲಿ ಮಳೆ ಬಾರದೆ ಎಮ್ಮೆಗುಂಡಿಯ ನೀರೆಲ್ಲವೂ ಬತ್ತಿ ಅದರಲ್ಲಿದ್ದ ಹಲ ವಾರು ಕಾಣಿ ಮೀನುಗಳು ಉಸಿರುಕಟ್ಟಿ ಕೆಸರ ಮೇಲೆ ಜಿಗಿದಾಡಿ, ಬಿಸಿಲಿನಿಂದ ಬೆಂದು, ಬಸವಳಿದು ಸಾಮೂಹಿಕವಾಗಿ ನಿಧನಗೊಂಡ ಈ ದಾರುಣವಾರ್ತೆಯನ್ನು ನಿಮ್ಮ ಮುಂದೆ ಅತ್ಯಂತ ಬೇಸರದಿಂದ ಇಡುತ್ತಿದ್ದೇನೆ. ಅದನ್ನು ಕಂಡಾಗಲೇ, ನಮ್ಮ ಮಹಾಸಾಗರಗಳು ಹೀಗೆಯೇ ಬತ್ತಿದರೆ ಅಲ್ಲಿರುವ ಮತ್ಸ್ಯಗಳ ಗತಿಯೇನು? ಅವನ್ನು ಆಶ್ರಯಿಸಿದ ಸಾಮಾನ್ಯ ಮತ್ಸ್ಯವ್ಯವಸಾಯಿಗಳ ಗತಿಯೇನು ಎಂಬ ಚಿಂತೆ ತಲೆದೋರಿದ್ದರಿಂದಲೇ, ಈ ಸಾಗರೋತ್ತರ ಮತ್ಸ್ಯವ್ಯವಸಾಯಿಗಳ ಸಮ್ಮೇ ಳನವನ್ನು ಜರಗಿಸಿದ್ದಾಗಿದೆ ಎಂಬ ನಿರ್ಣಯವನ್ನು ಮಂಡಿಸಿದೊಡನೆಯೇ, ಎರಡು ನಿಮಿಷಗಳ ಮೂಕಪ್ರಾರ್ಥನೆಯನ್ನು ವಿಧಿಸಿ.

ಅನಂತರ ಮಾತನಾಡುವ ಧೈರ್ಯ ಯಾರೊಬ್ಬರಿಗೂ ಬರಲಾರದು.

—**ಶಿವರಾಮ ಕಾರಂತ**

"ನನ್ನನ್ನು ದೇವರು ಗಂಡಸಾಗಿ ಹುಟ್ಟಿಸಿ ಅನ್ಯಾಯ ಮಾಡಿದ."

"ಏಕೆ? ಏನಾಯಿತು?"

"ಆಗುವುದೇನು? ಗಂಡಸಾದ ಮೇಲೆ ಒಂದು ಹೆಣ್ಣಿನ ಕೈಹಿಡಿದು ಸಂಸಾರ ಮಾಡಬೇಕಲ್ಲ! ಇನ್ನೇನಾಗಬೇಕು?"

ವರ್ಣ ದ್ವೇಷ

ಅವತ್ತು ವೆಂಕಟಶಾಮಿಯ ಮಗುವಿನ ನಾಮಕರಣ. ಊಟಕ್ಕೆ ಇನ್ನೂ ಒಂದು ತಾಸು ತಡವಿತ್ತು. ಅಂದಮೇಲೆ ನೆರೆದವರೆಲ್ಲ ಬಂದೆಡೆ ಕುಳಿತು ನಾಲಗೆ ಝಳಪಿಸುತ್ತಾ ಹರಟೆ ಕೊಚ್ಚುತ್ತಿದ್ದರು. ಆ ವಿಷಯ ಈವಿಷಯ ಆಡಿಕೊಂಡಿದ್ದಾಯಿತು. ಕೊನೆಗೆ ವರ್ಣದ್ವೇಷದ ಪ್ರಸ್ತಾಪ ಬಂತು. ದಕ್ಷಿಣ ಆಫ್ರಿಕದ ಸರಕಾರದ ನೀತಿಯನ್ನು ಖಂಡಿಸಿದ್ದೇ ಖಂಡಿಸಿದ್ದು. ಅಲ್ಲಿನ 'ಅಪಾರ್ಥಪೀಡೆ' (aparithoid) ಯನ್ನು ಹಳಿದಿದ್ದೇ ಹಳಿದಿದ್ದು.

ನಮ್ಮ ಆರ್ಭಟ ಕೇಳಿ ದೂರದ ಆರಾಮು ಕುರ್ಚಿಯಲ್ಲಿ ಕುಳಿತು ಯಾವುದೋ ಪತ್ರಿಕೆ ಮಗುಚುತ್ತಿದ್ದ ವೆಂಕಟಶಾಮಿಯ ಮಾವ ಮೆಲ್ಲಗೆ ಹರಟೆಯ ಗುಂಪಿನೆಡೆಗೆ ಬಂದರು.

"ಈಗ ನೀವೆಲ್ಲ ಆಫ್ರಿಕದಲ್ಲಿ ವರ್ಣದ್ವೇಷವಿದೆ ಎಂದು ಟೀಕಿಸ್ತಾ ಇರೋದು ತಾನೆ?" ಎಂದು ಅವರು ಮೀಸೆ ಹುರಿಮಾಡುತ್ತಾ ನಿಂತರು.

"ಅಲ್ಲವೇ ಮತ್ತೆ? ನೀವೇನಂತೀರಿ?" ಎಂಬ ಸವಾಲು ಬಂತು.

"ನಾನೇ? ನಾನನ್ನೋದೇನಿಲ್ಲ ದೀಪದಡಿಕತ್ತಲೆ ಅಂತೀನಿ ಅಷ್ಟೆ. ಬೇಕಿದ್ದರೆ ಇಲ್ಲಿ ನೋಡಿ" ಎಂದು ತಮ್ಮ ಕೈಯಲ್ಲಿದ್ದ ಚಿತ್ರಗಳ ಪತ್ರಿಕೆಯನ್ನು ನಮ್ಮ ಮುಂದೆ ತೆರೆದಿಟ್ಟರು.

ನೋಡಿದರೆ ಆ ಪುಸ್ತಕದಲ್ಲಿ ಪುಟಗಟ್ಟಳೆ ನಗ್ನ ಚಿತ್ರಗಳಿದ್ದಹಾಗೆ ಕಂಡಿತು. ಆದರೆ ಅವುಗಳಲ್ಲಿ ಹಲವನ್ನು ಯಾರೋ ಕತ್ತರಿಸಿ ತೆಗೆದಿದ್ದರು. ಉಳಿದವುಗಳು ನೀಗ್ರೋ ಸ್ತ್ರೀಯರ ಚಿತ್ರಗಳು ಮಾತ್ರ!

"ನೋಡಿ ಹೀಗೆ ಚಿತ್ರ ಲಪಟಾಯಿಸುವುದರಲ್ಲೂ ವರ್ಣದ್ವೇಷ ಅಪಾರ್ಥಪೀಡೆ...." ಎನ್ನುತ್ತಾ ತಂಬುಲ ಉಗುಳಲು ಹೋದರು ಮಾವ.

ನಾವೆಲ್ಲರು ಒಂದುಕ್ಷಣ ಗಪ್-ಚಿಪ್!

—ರಾಮಿ.

ಮಾದರಿ ಊರು

ಆಗಸ್ಟ್ ಹದಿನೈದರ ವೇಳೆಗೆ ಪೆಂಡಿಗ್‌ನಲ್ಲಿದ್ದ ಎಲ್ಲಾ ಅರ್ಜಿಗಳನ್ನು ತೆಗೆದು ನೋಡಿ, ಅದಕ್ಕೆ ಸೂಕ್ತ ಉತ್ತರ ಬರದುಹಾಕಿ ನಂತರ ಆಯಾದಿನ ಬಂದ ಅರ್ಜಿಗೆ ಆದಷ್ಟು ಮಟ್ಟಿಗೆ ಆಯಾದಿನವೇ ಉತ್ತರಿಸಿ, ತಾಲ್ಲೂಕು ಕಛೇರಿಯಲ್ಲಿ ಅನೂಚಾನವಾಗಿ ಬಂದಿರುವ 'ಡೆಡ್‌ಸ್ಲೊ' ನಡವಳಿಕೆಯನ್ನು ಕೊನೆಗಾಣಿಸಬೇಕೆಂದು ಯೋಚಿಸಿಕೊಂಡೇ ಕಛೇರಿಯೊಳಕ್ಕೆ ಕಾಲಿಟ್ಟೆ.

ಅಮಲ್ದಾರರು ಹೀಗೆ ಹೇಳದೆ ಕೇಳದೆ ಗುಮಾಸ್ತರ ಕೊಠಡಿಗೆ ಬಂದದ್ದು ನೋಡಿ ಬೆನ್ನಿಗೆ ಅಂಟಿಕೊಂಡಿದ್ದ ಕೋಟಿನೊಂದಿಗೆ, ಖಾಲಿ ಕುರ್ಚಿಗಳು ನಡುಗಿದುವು. ಹತ್ತು ಘಂಟೆಗೆ ಕಛೇರಿಗೆ ಬಂದಿದ್ದ ಗುಮಾಸ್ತರು ಹತ್ತೂಕಾಲಿಗೆಲ್ಲಾ ಕಾಫಿಗೆ ಹೋಗಿದ್ದರು. ಶಿರಸ್ತೆದಾರರು ಒಬ್ಬರು ಮಾತ್ರ ಸೀಟಿಗೆ ಅಂಟಿಕೊಂಡು ಹಳೆಯ ರಿಕಾರ್ಡುಗಳನ್ನು ಗೂರಾಡುತ್ತಿದ್ದರು. ಅವರಿಗೆ ನಾನು ಈರೀತಿ ಸರ್‌ಪ್ರೈಸಾಗಿ ವಿಸಿಟ್ ಕೊಡ್ತೀನಿ ಅಂಬೋದನ್ನ ನನ್ನ ಡವಾಲಿ ಜವಾನನೇ ಮುಂಚಿತವಾಗಿ ತಿಳಿಸಿರಬೇಕೆಂದು ನಾನು ಭಾವಿಸಿದೆ.

"ಏನ್ರಿ ಗುಮಾಸ್ತರೆಲ್ಲಾ ಎಲ್ಲಿ?" ಗಡುಸಾಗಿ ಕೇಳಿದ ನನ್ನ ಪ್ರಶ್ನೆಗೆ ಗಡಗಡನೆ ನಡುಗುತ್ತಾ ಶಿರಸ್ತೆ ಉತ್ತರಿಸಿದರು.

"ಇಲ್ಲೇ....ಕಾ....ಕಾಫಿಗೆ ಹೋಗಿದ್ದಾರೆ ಸ್ವಾಮಿ...."

"ಎಷ್ಟು ಸಲಾನ್ರಿ ಕಾಫಿಗೆ ಹೋಗೋದು?"

"ನನಗೆ ತಿಳಿದಹಾಗೆ ಮಾಮೂಲಾಗಿ ನಾಲ್ಕೈದು ಸಲ ಹೋಗ್ತಾರೆ ಸ್ವಾಮಿ. ನನಗೆ ತಿಳಿಯದಹಾಗೆ ಎಷ್ಟುಸಲವೋ ಗೊತ್ತಿಲ್ಲ...."

"ಹೀಗಾದ್ರೆ ಕಛೇರಿ ಕೆಲಸ ಸಾಗೋದು ಹೇಗ್ರಿ. ಇವರ್ಗೆಲ್ಲಾ ಕಾಫಿ ಕುಡಿಯೊಕೊಸ್ಕರ ಸರ್ಕಾರ ಸಂಬಳ ಕೊಡ್ತಾ ಇದೆಯೇ ಅಥ್ವಾ ಕಛೇರಿ ಕೆಲಸ ಮಾಡೋದಿಕ್ಕೋ...."

"ಕಾ....ಕಾಫಿ....ಅಲ್ಲ ಕಛೇರಿ ಕೆಲಸಕ್ಕೆ ಅಂತ...."

"ಸಾಕು ಸಾಕು ನಿಲ್ಲಿಸ್ರಿ. ಇನ್ಮೇಲಿಂದ ಒಂದೇ ಒಂದು ಸಲ ಕಾಫಿಗೆ ಹೋಗ್ಬೇಕೂಂತ ಹೇಳಿ. ಸೀಟು ಬಿಟ್ಟು ಅಲೆದಾಡೋ ಗುಮಾಸ್ತರ ಲಿಸ್ಟುಮಾಡಿ

ನನಗೆ ಕೊಡಿ" ಅಂತ ಹೇಳಿ ನಾನು ಕಛೇರಿಯ ಕೊಠಡಿಯನ್ನೆಲ್ಲಾ ಸೂಕ್ಷ್ಮವಾಗಿ ಪರಿಕಿಸಿದೆ. ಗುಮಾಸ್ತರುಗಳ ಟೇಬಲ್ಲಿನ ಮೇಲೆ ಕಂತೆಗಟ್ಲೆ ಫೈಲುಗಳು ಬಿದ್ದಿದ್ದವು. ಹಾಗೆ ನನ್ನ ದೃಷ್ಟಿ ಮತ್ತೊಂದು ಮೂಲೆಗೆ ತಿರುಗಿದಾಗಿ ಜೇಡನ ಬಲೆಯಲ್ಲಡಗಿದ್ದ ಬೃಹನ ಕಾಗದದ ಕಟ್ಟು ನನ್ನ ಕಣ್ಣು ಕುಕ್ಕಿತು.

" ಏನ್ರಿ ಯಾವುದ್ರೀ ಆ ಕಾಗದದ ಕಟ್ಟು ? " ಅಂತ ಕೇಳಿದೆ ನಾನು.

" ಅದು ಮೂಗರ್ಜಿ ಕಟ್ಟು ಸ್ವಾಮಿ...." ಶಿರಸ್ತೇದಾರರು ಪಲುಕಿದರು.

" ಮೂಗರ್ಜಿ ಕಟ್ಟು. ಅದನ್ಯಾಕ್ರಿ ಅಲ್ಲಿಟ್ಟೇದ್ದೀರಿ ? ಹೀಗೇನೇನ್ರಿ ಕಾಗದ ಪತ್ರಗಳ್ನ ಕಛೇರೀಲಿಡೋದು ? ಅದಕ್ಕೇನಾದ್ರು ಉತ್ತರ ಬರದ್ರೇನ್ರಿ ? " ನಾನು ಅವ್ಯಾಹತವಾಗಿ ರೇಗಿದೆ.

" ಇಲ್ಲ ಸ್ವಾಮಿ...."

"ಇಲ್ಲ....ಮತ್ತೇನ್ರಿ ನೀವಿಲ್ಲಿ ಕೂತುಮಾಡೋದು. ಪಗಾರ ಇಸ್ಕೊಳೋಲ್ಲಾ"

" ನಾನೇನು ಮಾಡ್ಲಿ ಸ್ವಾಮಿ. ಹಳೀ ಅಮಲ್ದಾರ ಸಾಹೇಬರಿಗೆ ಈ ಕಟ್ಟನ್ನ ತೋರಿಸಿದೆ. ಅವರು ಅದನ್ನು ಪರಾಂಬರಿಸದೇನೆ ಎಲ್ಲಾನು ಒಂದು ಕಡೆ ಕಟ್ಟಿ 'ಎಸೀರಿ ಅಂತ ಅಪ್ಪಣೆ ಕೊಡಿಸಿದರು. ಅರ್ಜಿಗಳ್ನ ನೋಡೋದಕ್ಕೇ ಪುರಸತ್ತಿಲ್ಲ. ಇನ್ನು ಮೂಗರ್ಜಿ ಯಾರ್ರಿ ನೋಡ್ತಾರೆ. ಮೂಗರ್ಜಿಗೇಂತ ಸರ್ಕಾರ ಅಮಲ್ದಾರನನ್ನ ಅಪಾಯಿಂಟ್ ಮಾಡ್ಕೊಂಡಾಗ ಅವನಿಗೆ ತೋರಿಸಿ ಅಂತ ರೇಗಿದ್ದರು ಸ್ವಾಮಿ. ಸ್ವಾಮಿ ಅಪ್ಪಣೆಯಂತೆ ನಾನೇ ಆ ಕಟ್ಟುಗಳನ್ನು ಆ ಮೂಲೇಲಿಡಿಸಿದ್ದೆ. ಈಚೆಗೂ ಹಲವಾರು ಬಂದಿತ್ತು. ಅದನ್ನೆಲ್ಲಾ ಆ ಕಟ್ಟಿನಲ್ಲೇ ಸೇರಿಸಿದ್ದೇನೆ ಸ್ವಾಮಿ" ಅಂತ ಆ ಶಿರಸ್ತೆದಾರ ಸಮಜಾಯಿಷಿ ಹೇಳಿದ.

ನಾನು ಮಾತಾಡದೆ ಮುಗುಮ್ಮಾದೆ. ಎಲಾ ! ಇಷ್ಟೊಂದು ಮೂಗರ್ಜಿಗಳು ಬಂದಿದ್ರು ಒಂದನ್ನಾದ್ರು ಸರಿಯಾಗಿ ಇತ್ಯರ್ಥಮಾಡಬೇಡ್ವೆ ? ಮೂಗರ್ಜಿಗಳಾದ ಕ್ಷಣ್ಯ ಅದರಲ್ಲಿ ಸತ್ಯಾಂಶ ಇಲ್ದೆ ಇರುತ್ತೆ ? ಇತ್ಯಾದಿ ಯೊಚನೆಗಳು ನನ್ನ ಮೆದುಳಿನಲ್ಲಿ ಕೆಲಸ ಮಾಡಿದವು.

" ಚೆನ್ನಾಗಿ ವದರಿ, ಕ್ಲೀನ್‌ಮಾಡಿ ಆ ಕಟ್ಟನ್ನು ನನ್ನ ರೂಂಗೆ ಕಳುಹಿಸಿ ಕೊಡಿ'' ಅಂತ ನಾನು ಶಿರಸ್ತೆದಾರನಿಗೆ ಆಜ್ಞಾಪಿಸಿ ನನ್ನ ಕೊಠಡಿಗೆ ನಡದೆ. ನಾನು ಹಿಂದಿರುಗಿ ನೋಡಿದಾಗ ಗುಮಾಸ್ತರುಗಳು ಕಳ್ಳರಂತೆ ತುಡಿಗಾಲಿಟ್ಟುಕೊಂಡು ಆಫೀಸಿನೊಳಗೆ ಸೇರಿಕೊಳ್ಳುತ್ತಾ ಇದ್ದುದು ಕಂಡುಬಂತು.

ಪ್ಲೇಯರ್ಸ್ ಸಿಗರೇಟನ್ನು ಹಚ್ಚಿಸಿ ಮುಗಿಲೆತ್ತರವಿದ್ದ ಆ ಮೂಗರ್ಜಿಕಟ್ಟನ್ನು ಹರಡಿಕೊಂಡು ಕುಳಿತೆ. ಜೀರ್ಣವಾಗಿದ್ದ ಹರಿದುಹೋಗಿದ್ದ ಅಕ್ಷರ ಕಾಣಿಸದ

ಬಣ್ಣ ಬದಲಾಯಿಸಿದ ರಂಗೇರಿದ ರಂಗಿಲ್ಲದ—ಇತ್ಯಾದಿ ಮೂಗರ್ಜಿಗಳು ಬೇಕಾದಷ್ಟಿದ್ದವು. ಇತ್ತೀಚೆಗೆ ಬರಿದಿರಬಹುದಾದಂತಹ ಹೊಸದಾಗಿದ್ದ ಮೂರು ಮೂಗರ್ಜಿಗಳನ್ನು ಮಾತ್ರ ತೆಗೆದು ಓದಿದೆ.

ಪತ್ರ ಹೀಗಿತ್ತು.

ತಾ||

ಮುಳ್ಳೂರು

ಅಮಲ್ದಾರ ಹುಜೂರರ ಪಾದಪದ್ಮಂಗಳಿಗೆ

ಸ್ವಾಮಿನ್

ತಾವು ಮುಳ್ಳೂರಿನ ಜಮಾಬಂದಿ ನಡೆಸಿದ ಮೇಲೆ ಈ ಊರಿನ ವಿಷಯ ವಾಗಿ ಯಾವ ಭಾವನೆ ತಳೆದಿರುವಿರೋ ಕಾಣೆ. ಈ ಕಾಗದ ನೋಡಿ ತಾವು ಅಚ್ಚರಿ ಗೊಳಗಾಗಬಹುದಾದರೂ ಇದರಲ್ಲಿ ಬರೆದಿರುವುದೆಲ್ಲಾ ಸಾಚಾ ಸಂಗತಿ ಎಂಬುದನ್ನು ಅರಿಕೆಮಾಡಿಕೊಂಡಿರುತ್ತೇನೆ.

ಖಾವಂದರವರೇ, ತಾವು ನಮ್ಮೂರಿಗೆ ಜಮಾಬಂದಿಗೆ ವಿಜಯಂಗೈದಾಗ, ಊರ ಬಾಗಿಲ ಮುಂದೆ ಹಸಿರುವಾಣಿ ಚಪ್ಪರ ಎಬ್ಬಿಸಿ, ತಳಿರು ತೋರಣಗಳಿಂದ ನಿಮ್ಮನ್ನು ಸ್ವಾಗತಿಸಿ, ಆಂಜನೇಯಲುವಿನ ಬಾಜಾ ಬಜಂತ್ರಿಯೊಡನೆ ಇಮಾಂ ಸಾಬುವಿನ ಮುರುಕು ಸಿರೋಟಿನ ಮೇಲೆ ತಮ್ಮನ್ನು ಕೂಡಿಸಿ, ಊರಿನ ಗಲ್ಲಿ ಗಲ್ಲಿಗಳಲ್ಲಿ ತಮ್ಮನ್ನು ಮೆರವಣಿಗೆ ಮಾಡಿದವನು ಈ ಊರಿನ ಪಟೇಲನೆಂಬುವುದು ತಮ್ಮ ಚಿತ್ತಕ್ಕೆ ಬಂದಿರಲಿಕ್ಕೆ ಸಾಕು. ಪಟೇಲ ಮುಳ್ಳೂರಯ್ಯನ ಪಾರ್ಟಿಯ ಜನಗಳೇ ಈ ವಿಷಯ ತಮ್ಮ ಕಿವಿಗೆ ಬೀಳಬೇಕೆಂದು ತಮ್ಮ ಪಕ್ಕದಲ್ಲೇ ಘಟ್ಟಿಯಾಗಿ ಮಾತನಾಡಿಕೊಂಡು ಹೋಗುತ್ತಿದ್ದರು. ಆದರೆ ಆ ಮಾವಿನ ಸೊಪ್ಪು ಯಾರಪ್ಪನ ಮನೆಯದೆಂದು ಖಾವಂದರಿಗೆ ತಿಳಿದಿರಲಾರದು. ನಮ್ಮೂರಿನ ಬಡ ಬೋರೆಗೌಡರುಗಳ ಬಾಗಾಯಿತುಗಳಲ್ಲಿ ಕಿತ್ತು ತಂದ, ತೆಂಗಿನ ಗರಿ, ಮಾವಿನ ತಳಿರುಗಳನ್ನು ಕೋದು ಕಟ್ಟಿಸಿದ ಚಪ್ಪರದಿಂದ ಪಟೇಲ ಮುಳ್ಳೂರಯ್ಯ ತನ್ನ ಪ್ರತಿಭೆಯನ್ನು ತಮ್ಮ ಮುಂದೆ ತೋರಿಸಿದ್ದಾನೆ. ಆಂಜನೇಯಲುವಿನ ಅಳಿಯನಿಗೆ ತಮ್ಮಲ್ಲಿ ಶಿಫಾರ್ಸುಮಾಡಿ ಒಂದು ಚಾಕರಿ ಕೊಡಿಸುವುದಾಗಿ ಆಸೆ ತೋರಿಸಿ, ಅವನ ಬಾಜಾಬಜಂತ್ರಿಯನ್ನು ತಮ್ಮ ಮೆರವಣಿಗೆಗೆ ಇಡಿಸಿದ್ದು, ಖಾವಂದರಿಗೆ ಹೇಗೆ ತಿಳಿಯಬೇಕು? ಸಾರೋಟನ್ನು ಒದಗಿಸಿದ ಇಮಾಂಸಾಬುವಿಗೆ ಒಂದು ನಯೇಪೈಸೆಯು ಕೊಡದೆ ಕಾಡಿಸುತ್ತಿರುವ ಈ ಮುಳ್ಳೂರಯ್ಯನ ಗುಣವನ್ನು ಏನನ್ನಬೇ[illegible]? ತಾವು ಬಂದಾಗ ಊರಿನವರನ್ನೆಲ್ಲಾ "ಅಣ್ಣಯ್ಯ" ತಮ್ಮಯ್ಯ ಅಂತ ಸಂಭೋದಿಸುತ್ತಿದ್ದವನು ತಾವು ಹೋದಮೇಲೆ ಏಕವಚನ ಸಂಭೋಧನೆಗೆ ಶುರುಹಚ್ಚಿದ. ತಮಗೆ ಅರ್ಪಿಸಿದ ಏಕ ಸೈಜಿನ ನಿಂಬೆ ಹಣ್ಣುಗಳು ನನ್ನ ತೋಟದಲ್ಲಿ

ಅವನು ಕತ್ತರಿಸಿಕೊಂಡು ಹೋದ ಮಾಲು ಎಂಬುದು ಹುಜೂರರಿಗೆ ತಿಳಿದಿದ್ದರೆ, ಖಂಡಿತ ತಾವು ಅದರಲ್ಲಿ ಹಾಕಿದ ಉಪ್ಪಿನಕಾಯನ್ನು ತರದಿರಲಾರಿರಿ.

ತಾವು ಅಮಲ್ದಾರರಾಗಿಯೂ, ಅಧಿಕಾರಿಗಳಾಗಿ ಬಂದು, ಹತ್ತು ಬಾರಿ ಜಮಾಬಂದಿ ನಡಸಿದರೂ ಮುಳ್ಳೂರಯ್ಯನ ಹೀನ ಗುಣ ತಮಗೆ ಅರ್ಥವಾಗುವುದಿಲ್ಲ. ಆದ್ದರಿಂದ ತಾವು ಮಫ್ತಿಯಲ್ಲಿ ಬಂದು ಅವನ ನಡವಳಿಕೆಗಳನ್ನು ಪರಾಂಬರಿಸಿ ಅವನ ಪಾಳೆಯಗಾರಿಕೆಯನ್ನು ತಪ್ಪಿಸಿ, ಮುಳ್ಳೂರನ್ನು ಅವನ ನಿರಂಕುಶ ಸಾರ್ವಭೌಮತ್ವದಿಂದ ಬಿಡಿಸಿ ಕೊಡಬೇಕಾಗಿ ಕೋರುತ್ತೇನೆ.

ಇಂತೀ

ಮತ್ತೊಂದುಪತ್ರ ತೆಗೆದು ಓದಿದೆ.

ತಾ||

ಮುಳ್ಳೂರು

ಅಮಲ್ದಾರ ಸಾಹೇಬರ ಶಿವಪಾದಗಳಲ್ಲಿ ಶರಣಾರ್ಥಿ.

ತಾವು ಮುಳ್ಳೂರಿನ ಜಮಾಬಂದಿ ನಡಶಿದಮ್ಯಾಲೆ ನನಗೆ ತೆಮ್ಮ ಮ್ಯಾಲೆ ಗುಮಾನಿಯಾಗದೆ. ಯಾಕಂದ್ರೆ ತಾವು ಆ ಶಾನುಭಾಗನಿಗೆ ಶರೀಕ್‌ಆಗಿದ್ದೀರಿ ಅಂತ. ಅವನು ತಮ್ಮ ಕೋಮಿನವನೇ ಇರಬಹುದು. ಆದರೆ ನಾನು ಈ ವಿಷಯದಲ್ಲಿ ತಮಗೆ ಹುಷಾರಿ ಕೊಡಬೇಕಾಗಿದೆ. ಶಾನುಭಾಗ ಶಿಂಗ್ರಯ್ಯ 'ಇತ ಶತ್ರು'ಗಳ ಸಾಲಿನಲ್ಲಿ ಮೊದಲನೆಯವ. ಎಂಥೆಂಥಾ ಸಾಹೇಬುಗಳಿಗೋ ದಗಾ ಹಾಕಿದ ದಗಲ್ ಬಾಜ್ ಅವ.

ಶಿಂಗ್ರಯ್ಯ ನಮ್ಮೂರಿಗೆ ಬರೋ ಖಾದಿ ಲೀಡ್ರುಗಳ್ಗೆಲ್ಲಾ ಎಳಸೀರಿನ ಅಭಿಷೇಕ ಮಾಡ್ತಾನಲ್ಲ, ಅದರಿಂದ ಯಾರಿಗೆ ನಷ್ಟ ಅನ್ನದೆ ತಮಗೆ ತಿಳಿದಿರಲಿಕ್ಕಲ್ಲ. ನಮ್ಮೂರಿನ ಬಡ ಬೋರೆಗೌಡ್ರುಗಳು ಎಳನೀರು ಬೋಳಸಿಕೊಂಡು ಶ್ಯಾನುಭಾಗನಿಗೆ ಹೆಸರು ಬರೋಹಾಗೆ ಮಾಡ್ತಾ ಅವ್ರೆ.

ಶಿಂಗ್ರಯ್ಯ ತಮಗೂ ದೇವರ ಶೇವೆ ಮಾಡಿಸಿ, ಪೊಂಗಲು, ಪುಳಿಯವರೆ ತಿನ್ನಿಸಿ ಸಾಗಿಹಾಕಿದ್ನಲ್ಲ. ಆಗ ತಾವು ಶಾನುಭಾಗ ಪಾಪ ಎಷ್ಟು ಖರ್ಚುಮಾಡಿದ್ದಾನೆ ಅಂತ ತಿಳ್ಕೊಂಡು ಇರಬಹುದು. ಆದರೆ ಶಾನುಭಾಗ ಆ ಖರ್ಚನ್ನೆಲ್ಲಾ ಮುಜರಾಯಿ ಗ್ರಾಂಟಿನ ಲೆಕ್ಕಕ್ಕೆ ಸೇರಿಸುತ್ತಾನೆ ಅನ್ನೋದು ತಮಗೆ ತಿಳಿದಿದ್ದರೆ, ತಾವು ಆ ತಿಳಿಯವರೆಯನ್ನು ಅಲ್ಲೇ ವಮನ ಮಾಡುತ್ತಿದ್ದಿರಿ. ದೇವರಿಗೆ ಮಾಡಿಸಿದ ಕಾಯಿ ಅರ್ಧಭಾಗ ಶ್ಯಾನುಭಾಗನಿಗೆ ಹೋಗಬೇಕು. ದೇವರ ಪ್ರಸಾದವೇ ಶ್ಯಾನುಭೋಗನ ಮನೆಗೆ ಬರುವುದರಿಂದ ಅವನ ಮನೆಯಲ್ಲಿ ಒಲೇ ಹಚ್ಚುವ ಪದ್ಧತಿಯೇ ಇಲ್ಲ. ಅವನ ಕೈಯಲ್ಲೇ ಮುಜರಾಯಿ ಗ್ರಾಂಟಿನ ಜುಟ್ಟಿರುವುದರಿಂದ ದೇವಸ್ಥಾನದ ಪಾರುಪತ್ತೇಗಾರರು ಉಸಿರು ಕಟ್ಟಿಕೊಂಡು ಶ್ಯಾನುಭಾಗನ ಸಪ್ಲೈಗೆ ನಿಂತಿದ್ದಾರೆ.

ಅವನು ಅಧಿಕಾರಿಗಳನ್ನು ಯಾಮಿಕರನ್ನು ಒಳಹಾಕಿಕೊಂಡು ದೊಡ್ಡ ಪುಡಾರಿಯಾಗಿದ್ದಾನೆ. ಊರಿನಲ್ಲಿ ಅವನವೇ ಎಷ್ಟು ಪಾರ್ಟಿಗಳಿವೆ ಅಂಬೋದನ್ನ ತಾವೇ ಬಂದು ಪರಾಂಬರಿಸಬೇಕು. ಚುನಾವಣೆಯ ಕಾಲದಲ್ಲಂತೂ ಅವನನ್ನು ಹಿಡಿಯುವವರೇ ಇಲ್ಲ. ಅವರಿವರನ್ನು ಎತ್ತಿಕಟ್ಟಿ ಶಾಖಾಯ ಲವಣಾಯದಿಂದ ಓಟುಗಿಟ್ಟಿಸಿ ತಾನು ಕಮಿರ್ಷ ಗಿಟ್ಟಿಸಿ ಪೌರಸಭಾಧ್ಯಕ್ಷ ನಿರ್ಮಾಪಕನಾಗಿದ್ದಾನೆ. ಒಟ್ಟಿನಲ್ಲಿ ಹೇಳುವುದಾದರೆ, ಅವನಿಂದ ಅನೇಕ ಮನೆಗಳು ಹಾಳಾಗಿವೆ. ಅವನು ದನದ ವೇಶದ ಹುಲಿ. ಜಹಾಪನ ಅವರು ಹೇಳದೇ ಕೇಳದೇ ಒಂದು ಸಲ ಮುಪ್ತಿಯಲ್ಲಿ ಬಂದು, ಇಲ್ಲಿನ ವಹಿವಾಟನ್ನು ನೋಡಿ, ಅವನನ್ನು ಮಟ್ಟ ಹಾಕಬೇಕೆಂದು ಬೇಡಿಕೊಳ್ಳುತ್ತೀನೆ.

ಇತೀ

ಎರಡೂ ಸಹಿಯಿಲ್ಲದ ಪತ್ರಗಳಾದರೂ ಅದು ಯಾರು ಬರೆದಿರಬಹುದೆಂದು ನಾನು ಊಹಿಸಿದೆ. ಪಟೇಲನ ಮೇಲೆ ಶಾನುಭೋಗ, ಶಾನುಭಾಗನ ಮೇಲೆ ಪಟೇಲ. ಮತ್ತೊಂದು ಪತ್ರದಲ್ಲಿ ಊರಿನ ಹತ್ತು ಮುಖ್ಯಸ್ತರು, ಇವರಿಬ್ಬರ ಮೇಲೂ ದೂರಿತ್ತಿದ್ದರು. ಎಲಾ ನಾನು ಜಮಾಬಂದಿ ನಡೆಸಿದಾಗ ಮುಳ್ಳೂರು ಹೇಗಿತ್ತು ? ಶಾನುಭಾಗನ ಸೌಜನ್ಯ ಪಟೇಲನ ಮೈತ್ರಿ, ಜನರ ಸಹಕಾರ ಎಲ್ಲವನ್ನೂ ನೋಡಿ ನಾನೇ ಭಲಾ ಎಂತಹ ಊರು ಎಂದು ಕೊಂಡಾಡಿದ್ದೆ. ನನ್ನ ಹಿಂದಿನವರೂ ಮುಳ್ಳೂರಿನ ಮೇಲೆ ಅದೇ ಅಭಿಪ್ರಾಯ ಪಟ್ಟಿದ್ದರು. ' ಫೆ ಎಂಥ ಹಿಪ್ರೋಕ್ರೆಸಿ ' ಅಂತ ವ್ಯಥೆಪಟ್ಟೆ.

" ಈ ಮೂಗರ್ಜಿಗಳು ನನ್ನ ಕೈಗೆ ಈಗ ಸಿಕ್ಕಿದುವಲ್ಲ ಅಂತ ಕೈ ಹಿಸುಕಿಕೊಂಡೆ. ಇನ್ನೊಂದು ಆರು ತಿಂಗಳ ಹಿಂದೆ ಇದು ಸಿಕ್ಕಿದ್ದರೆ, ಖಂಡಿತ ನಾನು ಮುಳ್ಳೂರನ್ನು ' ಮಾದರಿ ಊರು ' ಅಂತ ಶಿಫಾರಸುಮಾಡಿ ಸರ್ಕಾರದೋರು ಮುಳ್ಳೂರನ್ನು ಮಾದರಿ ಊರು ಅಂತ ಸ್ವಾತಂತ್ರ್ಯೋತ್ಸವ ರಂದರ್ಭದಲ್ಲಿ ಘೋಷಿಸಿ ಆ ಊರನ್ನು ಪುರಸ್ಕರಿಸುವ ಹಾಗೆ ಮಾಡುತಿರಲಿಲ್ಲ.

ಹಾಲಾಹಲ ತುಂಬಿರುವ, ಕಾಳಸಂತೆಯ, ಕೋಮು ಖಧೀಮರ ಆ ವಾಸಸ್ಥಾನವಾಗಿರುವ ಮುಳ್ಳೂರನ್ನು ' ಮಾದರಿ ಊರು ' ಅಂತ ಕರೆದು ಅನ್ಯಾಯ ಮಾಡಿದಕ್ಕಾಗಿ ನನ್ನ ತಲೆ ಸಿಡಿಯಿತು ಆಂಖಗಳಲ್ಲಿ ಅಶ್ರು ಒಸರಿತು.

—ಕೆ. ಎಸ್. ಕಿಟ್ಟಿನ್

ಆಫ್ರಿಕನ್ Quiz

ಕಾಲ—ವಿರಾಮಕಾಲ. ಅಂಕಗಳು : ನಿಮಗೀಗ 100 ಅಂಕಗಳಿವೆ.

[ಒಂದೊಂದು ಪ್ರಶ್ನೆಗೂ ಸರಿಯಾದ ಉತ್ತರ ಕೊಟ್ಟಹಾಗೆಲ್ಲ ಅದಕ್ಕಿಟ್ಟಿರುವ ಅಂಕಗಳು ಒಟ್ಟು ನಿಮಗಿರುವ ಅಂಕಗಳಲ್ಲಿ ಕಡಿಮೆಯಾಗುತ್ತಾ ಹೋಗುತ್ತವೆ. ಕೊನೆಗೆ ಸೊನ್ನೆಯಾದವನು ಖಂಡಿತ ಮನುಷ್ಯನಲ್ಲ. ಅವನಿಗೆ ರಾಯಭಾರೀ ವರ್ಗದಲ್ಲಿ ಉಚ್ಚಸ್ಥಾನ ಸಿಗುತ್ತದೆ. ಕೊನೆಗೆ 100 ಉಳಿದವನು ಸುಖಿ. 25 ಉಳಿದವನ ಜೀವನ Exciting. 50 ಉಳಿದವನು ಪತ್ರಿಕಾಕರ್ತ. 75 ಉಳಿದರೆ UNO ಜನರಲ್ ಅಸೆಂಬ್ಲಿಗೆ ಹೋಗಿ ಚೀರಾಡಲು ಲಾಯಖ್. ಸಾಮಾನ್ಯ ಮಾನವರಾರಿಗೂ ಈ ಪ್ರಶ್ನಾವಳಿಯನ್ನು ಉತ್ತರಿಸುವ ಶಕ್ತಿ, ಕುತೂಹಲಗಳಿರುವುವೆಂದು ನಿರೀಕ್ಷಿಸಲಾಗಿಲ್ಲ.]

1. ಹಾರ್ಟ್ ಆಫ್ ಡಾರ್ಕ್‌ನೆಸ್ ಎಂದರೇನು ? [ಹೈಡ್ರೋಜನ್ ಬಾಂಬ್, ಕ್ರುಷ್ಚೇವ್, ಐಕ್, ಬೆಲ್ಜಿಯನ್ ಕಾಂಗೋ] —5

2. ಕಬಾಕ, ನ್ಯೆಯರೆರೆ, ತೋರೆ, ಲುಂಡುಲ, ಡಂಡಂ—ಇವರ ಪೈಕಿ ಯಾರೊಬ್ಬರೂ ನಿಮಗೆ ಪರಿಚಿತರಾಗಿಲ್ಲವಲ್ಲ, ಏಕೆ ? ಪಂಚಶೀಲ ಯಾರಿಗೂ ಬೇಕಿಲ್ಲವಲ್ಲ ಏಕೆ ? —5

3. ಆಫ್ರಿಕಾದಲ್ಲಿ ಸ್ವಾತಂತ್ರ್ಯದ ಗಾಳಿ ಬೀಸುತ್ತಿದೆಯಲ್ಲಾ, ಅಲ್ಲಾದ ಹಾಗೆ ಇನ್ನೆಲ್ಲೆಲ್ಲಿ ಆಗಬೇಕೆಂದು ನಿಮ್ಮ ಅಭಿಪ್ರಾಯ ? [ಟಿಬೆಟ್, ಫಿನ್ಲೆಂಡ್, ಪೂರ್ವ ಬರ್ಲಿನ್, ಪಶ್ಚಿಮ ಮಾಸ್ಕೋ—ಇವುಗಳಲ್ಲೊಂದನ್ನು ಆರಿಸಿ ನಿಮ್ಮ ಆಯ್ಕೆಯನ್ನು ಸಮರ್ಥಿಸಿ.] —10

4. ಸ್ವಾತಂತ್ರ್ಯ ಗಳಿಕೆಯೆಂದರೆ ಯಾರಿಗೆ ಲಾಭ ? ಏಕೆ ? [ಸ್ವಾತಂತ್ರ್ಯ ಗಳಿಸಿದ ರಾಷ್ಟ್ರಕ್ಕೆ, ಸಾಮ್ರಾಜ್ಯ ಶಾಹಿಗಳಿಗೆ, ಕಮ್ಯೂನಿಷ್ಟರಿಗೆ, ಪತ್ರಿಕೆಗಳಿಗೆ] —5

5. ರುಆಂಡ ಉರುಂಡಿಯೋ, ರುಆಂಡ ಮತ್ತು ಉರುಂಡಿಯೋ ? ಹೇಗೆ ? ಫೇಂಡಾಮ್ವೃಗ ಇಲ್ಲಿಯೋ ಅಥವಾ ನಯಾಸಾ ಲ್ಯಾಂಡಿನಲ್ಲೋ ? —5

6. ಲಬೋ ಲಬೋ ಫೆಡರೇಷನ್ನಿಗೆ ಮೊದಲು ಸಹಾರ ಎಂದು ಏಕೆ ಹೆಸರಿತ್ತು? ಅದರ ಬೊಬ್ಬೆಯನ್ನು ಹೆಚ್ಚಿಸಿ ಫ್ರೋಡಾಗಿ ಹೋದ ಭಾಗವು ಯಾವುದು? [K.L. ಸೈಗಲ್, ಹಿಂದ್ ಸೈಕಲ್, ಸೆನೇಕ, ಗೊತ್ತಿಲ್ಲ.] —5

7. ನಿಜ ಹೇಳಿರಿ: ಆಫ್ರಿಕಾದಲ್ಲಿನ ಗೊಂದಲ ತೃತೀಯ ಮಹಾಸಮರವನ್ನಾರಂಭಿಸಲಿ ಎಂದು ನೀವು ಗುಟ್ಟಾಗಿ ದೇವರನ್ನು ಪ್ರಾರ್ಥಿಸಲಿಲ್ಲವೇ? ಆ ಯುದ್ಧ ಹೇಗೆ ಎಲ್ಲಿ ಆರಂಭವಾಗಿ ಏನೇನು ನಡೆಯಬೇಕೆಂದು ನಿಮ್ಮ ಯೋಜನೆ? —10

8. ಅನಾಗರಿಕತೆಯ ಕಾಲದಲ್ಲಿ ಆಫ್ರಿಕಾ ಹೇಗಿತ್ತು? ಆಗ ಐರೋಪ್ಯರು ಬೇಟೆಯಾಡಲು ಬಂದಾಗ ಮೊದಲು ಏನು ಮಾಡಿದರು? ಈಗ ಆಫ್ರಿಕಾ ಹೇಗಿದೆ? ಇದಕ್ಕೆ ಜವಾಬುದಾರರಾರು? ಸಮಭಾಜಕವೃತ್ತವನ್ನು ಯೂರೋಪಿಗೆ ಕಳುಹಿಸುವುದರಿಂದಾಗುವ ಪ್ರಗತಿ, ಸೌಲಭ್ಯಗಳನ್ನು ಐರೋಪ್ಯರಿಗೆ ಏಕೆ ಒದಗಿಸಬಾರದೆಂದು ಷೋಕಾಸ್ ನೋಟೀಸ್ ಯಾಕೆ ಕೊಡಬಾರದೆಂದು ಯಾರು ನೋಟೀಸ್ ಕೊಡಬೇಕು? ಯಾರಿಗೆ? [ಈ ಪ್ರಶ್ನೆಗೆ ಉತ್ತರ ಕೊಡಬೇಡಿ. ಪ್ರಶ್ನೆಯ ಅಂತರಾರ್ಥವೇನು ಎಂಬ ಬಗೆಗೆ (ನಿಮಗೆ ಬೇರೇನೂ ಬದುಕಿಲ್ಲದಿದ್ದರೆ) ಪ್ರಬಂಧ ಬರೆಯಿರಿ]—15

9. ಯಾರು ಯಾರಿಗೆ ಯಾವಾಗ ಹೇಳಿದರು?

a) ಎಡದ ಮೈಯಲಿ ಬೆಲ್ಜಿಯನ್ನರ
ಗಡಣಬಲದಲ್ಲಿ ಕಾಂಗೊಲೀಯರ
ಗಡಣವಿದಿರಲಿ ಕಬಕ, ಕಸವುಬು, ಲುಂಡುಲಾದಿಗಳು ।
ನಡುವೆ ನೀನೋಲಗದಳೊಪ್ಪುವ
ಕಡುವಿಲಾಸವ ಬಿಸುಟು ಪ್ಯಾಟ್ರಿಸ
ನುಡಿಯೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ ॥

[ಬೆಲ್ಜಿಯನ್ನರು ಷೋಂಬೆಗೆ, ಕಸವುಬು ಷೋಂಬೆಗೆ, ಕರ್ಣ ಕೌರವನಿಗೆ]

b) ಬಲವ ಮುರಿವೆನು ಎಲಿಸಬೆತ್
ವಿಲೆಯೊಳಗೆ ಠಾಣಾಂತರವನಿಕ್ಕುವೆ
ತೊಲಗಿಸುವೆ ಸೋಂಭೆರಿಯ ಸೈನ್ಯವ ಧೂಳಿಪಟ ಮಾಡಿ ।
ತಂದುದೇ ವಿಧಿ ತನ್ನನಿಲ್ಲಿಗೆ
ಮಂದಭಾಗ್ಯನು ಸಾನೆನುತ ಮನ
ನೊಂದು ನೆನೆದನು ಮಾಸ್ಕೊದಧಿಪತಿ ನಿಕಿಲ ಕೃಷ್ಣಘನ ॥

[ನಳಮಹಾರಾಜನು ಬಾಹುಕನಿಗೆ, ಲುಮುಂಬಾ ಮೋಟುಬುಗೆ]

c) ದೇವರು ಒಬ್ಬನೆ ಪೈಗಂಬರರೇ ದೇವದೂತರು
ಮತ್ತಾರಿಲ್ಲ, ಇಸ್ಲಾಂಧರ್ಮ ಸನಾತನ ಧರ್ಮ
ಉಳಿದದ್ದೆಲ್ಲಾ...............

[ಎಂ. ಆರ್. ಶ್ರೀ ಯಾರಿಗೆ, ಜಟಕಾಸಾಬಿ ಜನರಿಗೆ, ನಾಸೆರ್‌ಬೆನ್ ಗುರಿಯರ್ಗೆ]

d) ಆ ಚಂಚಳನಾ ಚಾಂಡಾಳನಾ
ದ್ರೋಹಿಯಾಪಾತಕನಿರವಂ ನೋಡು ಪಂಕೇಜವಕ್ತ್ರೇ

[ಲುಮುಂಬಾ ಲೇಡಿ ಸೆಕ್ರೆಟರಿಗೆ, ವೇರ್‌ವರ್ಡನ ಕೊಲೆಗಾರ ತನ್ನ ಹೆಂಡತಿಗೆ,
ಪಂಪ ರನ್ನನಿಗೆ]

e) ಲಾಂಗಂ ನಾಂಗಂ ಷಾರ್ಪ್‌ವಿಲೆ
ಯಂಗಳದೊಳು ಕರಿಯ ನಿನ್ನುವೊಳಂ
ಎನ್ನಸುವಿದು ನೆಟ್ಟನೆ ಪೋದುದಿಲ್ಲ
ಕಲ್ಲೆರ್ದೆತನದಿಂ ಬರ್ದನಾವನು ವೊಳನೇ

[ವೇರ್ವರ್ಡ್, ಕೌರವ, ಚೌರ್ಎಲ್ಸೆ ಅನುಕ್ರಮವಾಗಿ ಮಲನ್, ಕರ್ಣ,
ವೋಕ್ಸೆಟಂಗರಿಗೆ]—15

10. ದೇವರಾಣೆ ಹೇಳಿ, ಇವು ಎಲ್ಲಿವೆ, ಏನು, ಏತಕ್ಕೆ ಪ್ರಸಿದ್ಧಿ ?

ಅಂಗೋಲ, ಪ್ರಿಟೋರಿಯ, ಕೇಪ್ ಆಫ್ ಹೋಪ್‌ಲೆಸ್‌ನೆಸ್, ಸೆನೆಗಲ್, ಕಸಾಯಿ, ಡಾಹೊಮಿ, ಫೇಂಡಾವ್ಮೃಗ, ಕಸವುಬು, ಕೃಷ್ಟೋಫ್, ಡಲೆಸ್, ಹರ್‌ಬರ್ಟ್ ಆಪ್ಟಾ ಡೇರಾ, ಫರ್‌ಹತ್ ಅಬಾಸ್, ಅಲ್‌ಗ ವ್ಹೋರಿಯ, ಚಂದರ್ ಸೈಗಲ್, ಕಾಪರ್ ಬೋಲ್ಟ್ ಫೆಡರೇಷನ್ ಅಥವಾ ಲುಂಡುಲಾ. —15

11. ಯಾರು ಯಾರನ್ನು ಎಲ್ಲಿ ಹೇಗೆ ಬಂಧಿಸಿದರು ? ಇಲ್ಲವೇ ಯಾರು ಯಾರನ್ನು ಏನುಮಾಡಿ ಎಲ್ಲಿಗೆ ತಪ್ಪಿಸಿಕೊಂಡು ಹೋದರೇ ಬಂದರೇ ? ಸುಖವಿಲ್ಲದ ಸ್ವಾತಂತ್ರ್ಯವೇಕೆ ? ಒಂದು ಕಾದಂಬರಿ ಬರೆಯಿರಿ ? ಎಥಿಯೋಪಿಯಾದಿಂದ ಕನ್ನಡ ಕಾದಂಬರಿ ಬಂದೀತೇ ಇಲ್ಲವೇ ? ಏದಬೇಡಿ. ಈ ಪ್ರಶ್ನೆಗೆ ಉತ್ತರವಿಲ್ಲ! ಕಾಂಗೋದಲ್ಲಿ ಕೇಳಿ !—Whither Africa ? Whither cold war ?

ಅಥವಾ

ಆಫ್ರಿಕಾ ? ಮುಗಿಯಲಿಲ್ಲ. —10

—ಅ. ರಾ. ಸೇ.

ಅಲಾರಂ ಗಡಿಯಾರ

"ನಿನ್ನೆ ತಗೊಂಡು ಹೋದ ಗಡಿಯಾರ ವಾಪಸು ತಂದಿದೇನೆ ಭೀಮರಾಯರೇ. ಇನ್ನೂ ಗಟ್ಟಿಯಾಗಿ ಅಲಾರಂ ಹೊಡೆಯುವ ಗಡಿಯಾರ ಬೇಕು."

"ಹಾಗಾದರೆ ಈ ಗಡಿಯಾರ ನೋಡಿ....'ಟ್ರಿಣ್ ಣ್....' "

"ಈಗೇನೋ ಗಟ್ಟಿಯಾಗಿ ಕೇಳಿಸುತ್ತೆ. ಆದರೆ ನಿದ್ರೆಯಿಂದ ಎಚ್ಚರಿಸಬೇಕಾದರೆ ಅದು ಬೇರೆ ಮಾತು."

"ಒಂದು ದಿನ ಇಟ್ಟುಕೊಂಡಿದ್ದು ನೋಡಿ."

"ಈಗ 'ಬಿಗ್‌ಬೆನ್ನು' ಬರೋದಿಲ್ವೇ ?"

"'ಬಿಗ್‌ಬೆನ್ನು' ಯಾಕೆ, ಅದರ ತಾತನ ಹಾಗೆ ಜಾಗಟೆ ಬಡಿಯುತ್ತೆ ಇದು. ನಿಮ್ಮನ್ನೂ ಎಬ್ಬಿಸುತ್ತೆ, ಪಕ್ಕದ ಮನೆಯವರನ್ನೆಲ್ಲ ಎಬ್ಬಿಸುತ್ತೆ. ಅಸಲ್ ಸ್ವಿಸ್ಸು."

"'ಸ್ವಿಸ್ಸು'ಗಳಿಗೆ ಸಾಕಿರಬಹುದು ಇದರ ಸದ್ದು ; ನಮ್ಮ ವಿಶ್ವೂಗೆ ಸಾಲದು ಇವೆಲ್ಲ."

"ಒಂದು ರಾತ್ರಿ ಇಟ್ಟುಕೊಂಡಿದ್ದು ನೋಡಿ. ನಾಳೆ ನಾಡಿದ್ದರಲ್ಲಿ ಇನ್ನೂ ಬಲವಾಗಿ ಹೊಡೆಯುವ 'ಹಿರೋಷಿಮಾ', 'ನಾಗಸಾಕಿ' ಗಡಿಯಾರಗಳು ಬರುತ್ವೆ. ಅವನ್ನು ನೋಡಿ ಬದಲಾಯಿಸಿಕೊಳ್ಳಬಹುದು."

* * * *

"ಭೀಮರಾಯರೇ, ನೀವು ನಿನ್ನೆ ಕೊಟ್ಟ ಸ್ವಿಸ್ಸು ವಾಪಸು ತಂದಿದೇನೆ. ದಯವಿಟ್ಟು ನೀವು ಬೇರೆ ಒಂದನ್ನು ಕೊಡಬೇಕು."

"ಯಾಕೆ, ನಿಮ್ಮ ವಿಶ್ವೂಗೆ ಎಚ್ಚರವಾಗಲಿಲ್ಲವೇ ಇದರ ಜಾಗಟೆಯಿಂದ ?"

"ವಿಶ್ವೂನ ಜಾಗಟೆ ಬಾರಿಸಿ ಎಚ್ಚರಿಸುವುದು ಹಾಗಿರಲಿ, ಇದರ ಕಟ್ ಕಟ್ಟೇ ಬಹಳ ಸದ್ದು ನನಗೆ. ಅದನ್ನು ಕೇಳುತ್ತಾ ರಾತ್ರಿಯೆಲ್ಲಾ ನಿದ್ದೆಯೇ

ಬರಲಿಲ್ಲ. ಬೆಳಗಿನಜಾವದ ಹೊತ್ತಿಗೆ ಜೊಂಪುಹತ್ತಿತು, ಅಲಾರಂ ಕೇಳಿಸಲಿಲ್ಲ ವಿಶ್ವ್ಯಾಗೇನೋ ಎಚ್ಚರವಾಯಿತಂತೆ ಅಲಾರಂನಿಂದ. ಆದರೆ, ಭೀಮರಾಯರೇ, ನಾನು ರಾತ್ರಿಯೆಲ್ಲ ನಿದ್ದೆಮಾಡಬೇಕೋ ಇಲ್ಲವೋ ? "

" ಹಾಗಿದ್ರೆ ಒಂದು ದಿನ ತಡೆಯಿರಿ. 'ಹಿರೋಷಿಮಾ', 'ನಾಗಸಾಕಿ' ನಾಳೆ ಬಂದರೂ ಬರಬಹುದು. ಇವತ್ತು ರಾತ್ರಿಗೆ ಈ ನೀಗ್ರೋ ಹೆಂಗಸಿನ ಮುಖದ ಗಡಿಯಾರ ತೆಗೆದುಕೊಂಡು ಹೋಗಿ ಟ್ರೈ ಮಾಡಿ."

* * * *

" ಭೀಮರಾಯ್ರೇ, ನಿಮ್ಮ ನಿಗ್ರೋ ಹೆಂಗಸಿನ ಗಡಿಯಾರ ಬಲು ತಂಟೆ ಕೊಟ್ಟಿತು ರಾತ್ರಿಯೆಲ್ಲಾ. ಅದರ ಟಕಟಕ ಸದ್ದೇನೋ ಕಡಿಮೆಯೇ. ಆದರೆ...."

" ಆದರೆ .. ಏನು ? "

" ರಾತ್ರಿಯೆಲ್ಲಾ ನೀಗ್ರೋಗಳ ಸ್ವಪ್ನವೇ. ಘನಾ, ನೈಜರ್, ಡಾಹೋಮಿ, ಇವರುಗಳ ಕಾಟ ಹಿಡಿದುಬಿಡ್ತು. ಬಿಳೀ ಹಲ್ಲುಗಳನ್ನು ಬಿಟ್ಟುಕೊಂಡು ದೊಡ್ಡ ತುಟಿಗಳಿಂದ 'ಲಾಫಿಂಗ್ ಸಾಂಬಾ' ಹಾಗೆ ರಾತ್ರಿಯೆಲ್ಲಾ ಗಹಗಹಿಸಿ ನಗುತ್ತಿದ್ದರು, ನೀಗ್ರೋಗಳು. ಕತ್ತಲೆಯಲ್ಲಿ ಕಣ್ಣುಬಿಟ್ಟು ನೋಡಿದರೆ ನೀಗ್ರೋ ಹೆಂಗಸಿನ ಕಣ್ಣಿನ ಬಿಳಪು ಹೊಳಪಾಗಿ ಕಾಣುತ್ತಿತ್ತು. ಕಣ್ಣುಮುಚ್ಚಿದರೆ rock'n roll 'ಸಾಂಬಾ'ಗಳ ನಗು. ಹೀಗಾಗಿ ಬೆಳಿಗ್ಗೆ ಏಳೋಹೊತ್ತಿಗೆ ಅಲಾರಂ ಕೇಳಿಸಲೇ ಇಲ್ಲ. ಇವತ್ತೂ ಕೂಡ ವಿಶ್ವ್ಯಾನೇ ಬಂದು ಎಬ್ಬಿಸಿದ."

" ನಾಳೆ ನಾಡಿದ್ದರಲ್ಲಿ 'ಹಿರೋಷಿಮಾ', 'ನಾಗಸಾಕಿ' ಬರುವುದು ಖಂಡಿತ. ಟೋಕ್ಯೋದಿಂದ ಕೇಬಲ್ ಬಂದಿದೆ. ಇವತ್ತು ನಿಮಗೆ ಇನ್ನೊಂದು ತರಹದ ಗಡಿಯಾರ ಕೊಡ್ತೀನಿ, ಟ್ರೈ ಮಾಡಿ. ಕ್ರೋಮಿಯಂ ಪ್ಲೇಟೆಡ್ದು."

* * * *

" ಭೀಮರಾಯ್ರೇ, ನಿಮ್ಮ ಕ್ರೋಮಿಯಂ ಗಡಿಯಾರ ಸೊಗಸಾಗಿ ನಿದ್ದೆ ಕೊಟ್ಟಿತು ನನಗೆ, ನಿನ್ನೆ ರಾತ್ರಿಯೆಲ್ಲ ಮೂರು ದಿನದಿಂದ ನಿದ್ದೆ ಇಲ್ಲದ್ದೋ ಏನೋ. ಮಲಗಿಕೊಂಡಾಗಿನಿಂದ ಬೆಳಿಗ್ಗಿನವರೆಗೆ ಸೊಗಸಾದ ಹಾರ್ಮೋನಿಯಂ ಸಂಗೀತ ಕೇಳಿದಂತಿತ್ತು."

" ಕ್ರೋಮಿಯಂ.... ಹಾರ್ಮೋನಿಯಂ ! "

" ಭೀಮ್ರಾಯ್ರೇ, 'ವೀಣಾ' ಎಂತ ಯಾವುದಾದರೂ ಗಡಿಯಾರ ಇದೆ ಯೇನು ? ಯಾಕೆಂದರೆ ನನಗೆ ಹಾರ್ಮೋನಿಯಂಗಿಂತ ವೀಣಾ ಎಂದರೆ ಇಂಪು."

"ಆಹಾ! ಇದೆ! 'Veenaa' ಎಂತಲೇ ಒಂದು ಫ್ರೆಂಚ್ ಗಡಿಯಾರ ಬಂದಿದೆ. ನೀವು ಕೇಳೋತನಕ ಮರೆತೇ ಹೋಗಿತ್ತು. ಇದನ್ನು ಇವತ್ತು ರಾತ್ರಿ ಇಟ್ಟುಕೊಂಡು ಟ್ರೈ ಮಾಡಿ."

"ನಾಳೆ ಹೊತ್ತಿಗೆ 'ಹಿರೋಷಿಮಾ', 'ನಾಗಸಾಕಿ' ಗಡಿಯಾರಗಳು ಬಂದೇ ಬರುತ್ವೆ ಅನ್ನಿ?"

"ಇನ್‌ವಾಯ್ಸ್ ಬಂದಿದೆ, ಇವತ್ತು ತಾನೇ!"

* * * *

"ಭೀಮ್ರಾಯ್ರೇ!"

"ರಾತ್ರಿ ಚೆನ್ನಾಗಿ ನಿದ್ದೆ ಬಂತೇ ರಾಯರೇ?"

"ಸೊಗಸಾಗಿ ಬಂತು, ನಿಮ್ಮ ದಯದಿಂದ."

"ಯಾಕೆ? ನಿನ್ನೆ ಕೊಟ್ಟ ಗಡಿಯಾರ ವಾಪಸು ತರಲಿಲ್ಲವೇ?"

"ಇಲ್ಲ, ಅದನ್ನು ಇಟ್ಟುಕೋತೀನಿ. ಇವತ್ತು 'ಹಿರೋಷಿಮಾ', 'ನಾಗಸಾಕಿ' ಬರುತ್ವೇ ತಾನೇ?"

"ಬಂದಿವೆ, ಕಡೆಗೂ; ನೋಡುವಿರಂತೆ. ಆದರೆ ಈಗೇಕೆ? Veenaa ಇರುವಾಗ?"

"ಬೇಕ್ಬೇಕು, ಬೇಕೇಬೇಕು ಭೀಮ್ರಾಯ್ರೇ, ಬೆಳಿಗ್ಗೆ ಎಬ್ಬಿಸೋಕೆ ಒಂದು ಹಿರೋಷಿಮಾ ಬಾಂಬಿನಂಥದೇ ಬೇಕು. 'Veenaa' ಫ್ರೆಂಚು ಎಂದಿರೋ ಇಲ್ಲವೋ, ರಾತ್ರಿಯೆಲ್ಲಾ ಫ್ರೆಂಚ್ ಸ್ವಪ್ನಗಳೇ. ಇವತ್ತೂ ಎಚ್ಚರವಾಗ್ಲಿಲ್ಲ."

"ಇವತ್ತೂ ಹಾಗಾದರೆ ವಿಶ್ಶೂನೇ ಬಂದು ಎಬ್ಬಿಸಿದ ಅನ್ನಿ?"

"ಇಲ್ಲ"

"ಅದೇಕೆ?"

"ನಿನ್ನೆಯಿಂದ ವಿಶ್ಶೂಗೆ ಕಾಲೇಜು ತೆಗೆಯಿತು. ರಜಾದಿನಗಳಲ್ಲಿ ಅಲಾರಂ ಇಲ್ಲದಿದ್ದರೂ ಏಳಬಲ್ಲವನು ಕಾಲೇಜು ತೆರೆಯಿತೆಂದರೆ ಅವನನ್ನೆಬ್ಬಿಸೋಕೆ ಜಪ್ಪಯ್ಯನೇ ಬರಬೇಕು."

"ಹಾಗಾದ್ರೆ ಈಗಲೂ ನೀವು 'ಹಿರೋಷಿಮಾ' ಗಡಿಯಾರಕ್ಕೇ ಗಿರಾಕಿ ಅನ್ನಿ?"

"ಅದೂ ಬೇಕು, 'ನಾಗಸಾಕೀ'ನೂ ಬೇಕು; ಅದು ನನಗೆ. ವಿಶ್ಶೂಗೆ 'ಹಿರೋಷಿಮಾ' ಇರಲಿ ಅವನ ರೂಮಲ್ಲಿ"

" ಹಾಗಾದ್ರೇ ' Veenaa ' ? "

" ಅದೂ ಇರಲಿ ; ನನಗೆ. ಅದು ಫ್ರೆಂಚು ಅಂದ್ರೋ ಇಲ್ಲವೋ ! ಅದು ತಲೇ ಹತ್ತಿರ ಇದ್ರೆ ಪ್ಯಾರಿಸ್ ನೋಡುತ್ತಾ ಇರಬಹುದು ರಾತ್ರಿಯೆಲ್ಲ ! "


ಭೀಮ್ರಾಯ್ರು : " ರೀ ವೆಂಕಟೇಶ್ ! ಇವರಿಗೆ ಬಿಲ್‌ಮಾಡಿ ಮೂರು ಟೈಂಪೀಸುಗಳು ;

' ಹಿರೋಷಿಮಾ '—ಒಂದು
' ನಾಗಸಾಕಿ ' —ಒಂದು
' Veenaa ' —ಒಂದು

ಡಿಸ್ಕೌಂಟ್ ಅಷ್ಟೂ ರಾಯರಿಗೇ ಕೊಡೋಣ, ನಮಗೆ ಬೇಡ ! "

ಒಂದು ಸೆಕೆಂಡಿನ ನಂತರ, " ರೀ, ವೆಂಕಟೇಶ್, ಮತ್ತೊಂದೊಂದು ಹತ್ಹತ್ತು ಗ್ರೋಸ್ ' ಹಿರೋಷಿಮಾ ', ' ನಾಗಸಾಕಿ ', 'Veenaa'ಗೆ ಇಂಡೆಂಟ್ ಕಳಿಸ್ಬಿಡಿ ಇವತ್ತೇ. ಕಾಲೇಜುಗಳೆಲ್ಲ ಓಪನ್ ಆದ್ವು ! "

—ಡೂನು



ಭೂತ ಚೇಷ್ಟೆ!

ಹಿಂದಿನ ಕಾಲವೇ ಚೆನ್ನು ಹಿಂದೆ ಪಟ್ಟ ಸುಖವೇ ಸುಖ. ಹಿಂದಿನ ಕಾಲದ ಜನಗಳೆಲ್ಲಾ ಗಟ್ಟಿಗರು. ಹಿಂದಿನ ಕಾಲದ ಬೆಣ್ಣೆಯೂ ಬಲುಜಿಡ್ಡು. ಹಿಂದಿನ ಮಂತ್ರಿಯೇ ವಾಸಿ. ಉಬ್ಬಿಸಿದರೆ ಊರಲ್ಲೇ ಇರುತ್ತಿದ್ದ. ಹಿಂದಿನ ಹೆಂಡತಿ ನಿಜಕ್ಕೂ ಮರ್ಯಾದಸ್ತೆ. ಬೈದರೂ ಹೊಟ್ಟೆತುಂಬಾ ಹಾಕುತ್ತಿದ್ದಳು. ಹಿಂದಿನ ಬೆಂಚೇ ಸ್ವರ್ಗ, ಹಿಂದಿನ ಸೀಟೇ ಚೆನ್ನು ಸಿನಿಮಾದಲ್ಲಿ ಅದರ ಕ್ಯೂನಲ್ಲೂ ಅಷ್ಟೆ. ಹಿಂದಿನವನಿಗೇ ಲಾಭ. ಟಿಕೆಟ್ ಸಿಗದೆ ಹೋದರೆ ಹಿಂದಿನ ಕಾಲದ ಎಸ್. ಎಸ್. ಎಲ್. ಸಿ. ಗಿರುವ ಬೆಲೆ ಈಗಿನ ಎಷ್ಟೋ ಡಿಗ್ರಿಗಳಿಗಿಲ್ಲ. ಹಿಂದಿನ ದುಡ್ಡು ಈಗ ರೂಪಾಯಾಗಿ, ಕಾಣದಾಗಿದೆ! ಹಿಂದಿನ ಕಾಲದ ಮನೆಗಳೆಲ್ಲಾ ವಿಶಾಲ. ಮನಸ್ಸೂ ವಿಶಾಲ. ಹಿಂದಿನ ಕಾಲದ ಜಂಬ ಈಗೇನಿದೆ. ಈಗ ಮಾಡೋಣವೆಂದರೆ ನಡೆಯೊಲ್ಲ. ಹಿಂದಿನ ಮನೇಗೇ ಬಾಡಿಗೆ ಕಮ್ಮಿ. ಆದರೆ ಹಿಂದಿನ ಮನೆಯವರ ರೇಡಿಯೋ ಗಲಾಟೆ ಹೇಳತೀರದು. ದಿನ ಸಾಲತೀರಿಸಿದರೇನೇ ಹೊಸ ಸಾಲ ದೊರೆಯುವುದು. ಹಿಂದಿನ ಸಾಹೇಬರೇ ಉದಾರಿಗಳು. ಖುಷಿಯಾದಾಗ ಖಾಲಿ ಶೀಶೆಗಳನ್ನಾದರೂ ಕೊಡುತ್ತಿದ್ದರು. ಹಿಂದೆಲ್ಲಾ ಖಾಯಿಲೆಗಳು ಬಂದರೂ ಜನ ಔಷಧಿ ಕುಡಿಯುತ್ತಿರಲಿಲ್ಲ. ಬದುಕಿಕೊಳ್ಳುತ್ತಿದ್ದರು. ಹಿಂದಿನ ತಪ್ಪೇ ಮುಂದಿನ ಬುದ್ಧಿ. ಹೀಗೆ ಹಿಂದೆಯೂ ಇತ್ತು ಇಂದೂ ಇದೆ. ಹಿಂದಿನ ವೈಭವವನ್ನೇ ನಾವು ಹಾಡಿ ನಲಿಯುವುದು. ಹಿಂದಿನ ಸ್ನೇಹ ಉಳಿಯುವುದೇ ಕಷ್ಟ. ಹಿಂದಿನಿಂದ ಒದೆಯುವುದೇ ಅನೂಚಾನವಾಗಿ ಬಂದಿರುವ ಪದ್ಧತಿ. ಹಿಂದಿನ ಲೆಖ್ಖವೇ ಶ್ಯಾನುಭೋಗನ ಬಂಡವಾಳ. ಹಿಂದೆ ಹಿಂದಕ್ಕೆ ಬೀಳುವುದೇ ನಾವು ಬಾಜಿಕಟ್ಟುವ ಕುದುರೆಯ ಹುಟ್ಟುಗುಣ!

—ಹಾ. ರಾ.

ಗಾಂಪರ ಗುಂಪು

" ಡೆಮಾಸ್ಕಸ್ "

ನಭೋಮಂಡಲದ ಮೇಘರಾಶಿಗಳನ್ನು ಬೇಧಿಸಿಕೊಂಡು, ಕಾಣದ ಕತ್ತಲಲ್ಲಿ ಶಿಷ್ಯ - ಗುರು ಗಾಂಪರನ್ನೊಳಗೊಂಡ 'ಅಯೋಧ್ಯಾರಾಣಿ" ಪೂರ್ವದಿಕ್ಕಿನ ಕಡೆಗೆ ಹಾರಿ ಸಾಗಿತ್ತು.

ಒಮ್ಮೆ ನಿದ್ರೆ—ಮತ್ತೆ ಎಚ್ಚರಿಕೆ—ಮಗದೊಮ್ಮೆ ಅರೆನಿದ್ರೆ ಅರೆಗನಸುಗಳ ನಡುವೆ ಅರ್ಧ ಕಾಲುಚಾಚಿ ಹಾಗೆ ಹೀಗೆ ಸರಿಪಡಿಸಿಕೊಂಡು ಗಗನ ಪಯಣವನ್ನು ಸಾಗಿಸಿದ್ದರು ನಮ್ಮ ಕಥಾನಾಯಕಮಣಿಗಳು.

'ಯುಲ್‌ಬ್ರನ್ನರನಂತಹ ತಲೆಯ ಪ್ರಿಯ ಭಾರತೀಯನೇ'- ಎಂದು ಗಾಂಪರೊಡೆಯರ ಬೋಳುತಲೆಯನ್ನು ಸವರಿದ ದೊರೆಸಾನಿಗೆ ಗಾಢನಿದ್ರೆ ಬಂದಿತ್ತು- ಗಾಂಪರೊಡೆಯರಿಗೊ ಹೇಗೆ ಹೇಗೇ ಒರಗಿದರೂ ಕಣ್ಣುಮುಚ್ಚಲಾಗಲಿಲ್ಲ. ಭೋರೆಂಬ ಒಂದೇ ಶೃತಿಯ ನಾಲ್ಕು ಎಂಜಿನ್ನುಗಳ ಶಬ್ದ, ಪಕ್ಕದಲ್ಲಿದ್ದ ದೊರೆಸಾನಿಯ ಗೊರಕೆ, ಕಿಟಕಿಯಲ್ಲಿ ನೋಡಿದರೆ ಕತ್ತಲಗವಿ. ಎಲ್ಲ ದೀಪಗಳೂ ಆರಿದ್ದು ಚಿಕ್ಕ ದೊಂದು ದೀಪ ಮಾತ್ರ ಮಂಕಾದ ಬೆಳಕನ್ನು ಚೆಲ್ಲಿತ್ತು.

ಆ ಮಂಕಾದ ಬೆಳಕಿನಲ್ಲಿ ಮಂಕೆ ಹಾಗೇ ಗುರುಗಳ ಕಡೆ ನೋಡಿದ, ಅವರ ಮಗ್ಗಲು ಪೀಠದಲ್ಲಿದ್ದ ದೊರೆಸಾನಿಯನ್ನು ನೋಡಿದ. ಅವಳ ಮುಖದಲ್ಲಿ ಮಂದ ಹಾಸವನ್ನು ಕಂಡ, ಕೆಂಪುರಂಗಿನ ತುಟಿ ಅಲುಗಿದ್ದು ಕಂಡ, ಯಾವ ಮಧುರ ಸ್ವಪ್ನ ವನ್ನು ಕಾಣುತ್ತಿದ್ದಳೋ! ಗುರುಗಳತ್ತ ಹೊರಳಿ ಅವರ ತಲೆಯನ್ನು ನೇವರಿಸುತ್ತಿದ್ದುದ ಕಂಡ.

" ಮರುಳಾ ನೋಡು "—ಎಂದ. ಮರುಳನಿಗೋ ಆ ಕೆಂಪು ಪಾನೀಯದ ಅಮಲು ಇನ್ನೂ ಇತ್ತು ಅರೆಗಣ್ಣು ಬಿಟ್ಟು ಹಾಗೇ ನೋಡಿದ.

" ಅಯ್ಯೋ ಗುರುಗಳ ತಪಸ್ಸು ಫಲಿಸಿರಬೇಕು—ಅವರ ಭಾಗ್ಯ ನಮಗಿಲ್ಲ ದಾಯಿತಲ್ಲಾ " ಎಂದ.

" ಏನೋ ಅಮ್ಮಾ ಗುರುಗಳ ಭಾಗ್ಯ "

" ಆ ದೊರೆಸಾನಿಯನ್ನು ನೋಡೋ....ಅದು ಭಾಗ್ಯವಲ್ಲವೇನೋ "

" ಮರುಳಾ—ಅದು ಅವಳ ತಪಸ್ಸಿನ ಭಾಗ್ಯವಿರಬೇಕು—ಪರಶಿವನಂತಹ ಗುರುಗಳಿಗೆ ಈ ದೊರಸಾನಿ ಹೀಗೆ ತೊಂದರೆ ಕೊಡಬಹುದೆ? "

" ಆ ತೊಂದರೆ ಗುರುಗಳಿಗೆ ಬ್ಯಾಡ--ಅಂತಹ ತೊಂದರೆ ನನಗೆ ಕೊಡಲಿ ಆ ಪರಶಿವ "

" ಗುರುಗಳನ್ನ ಅವಳ ತೊಂದರೆಯಿಂದ ಪಾರುಮಾಡಬೇಕು ಮರುಳಾ "

" ಹೌದು ಅದು ಶಿಷ್ಯರಾದ ನಮ್ಮ ಆದ್ಯ ಕರ್ತವ್ಯ"– ಎಂದು ಮರುಳ ಹೊದ್ದ ಹೊದಿಕೆ ತೆಗೆದು ಗುರುಗಳ ಬಳಿ ಬಂದ. " ಗುರುಗಳೇ ಈ ದೊರೆಸಾನಿಯನ್ನು ಎಚ್ಚರಿಸಿ ಅವಳ ಉಪಟಳದಿಂದ ನಿಮ್ಮನ್ನು ಬಿಡುಗಡೆ ಮಾಡುವುದು ಈ ಶಿಷ್ಯನ ಕರ್ತವ್ಯ ಎಂದು ಭಾವಿಸಿ ಬಂದಿದ್ದೇನೆ. ಅಪ್ಪಣೆಯೆ ? "—ಎಂದು ಕೇಳಿದ.

" ಮರುಳಾ—ನಿದ್ರೆಯಲ್ಲಿರುವವರಿಗೆ ತೊಂದರೆ ಕೊಟ್ಟರೆ ಮುಂದಿನ ಜನ್ಮದಲ್ಲಿ ತಿಗಣೆಯಾಗಿ ಹುಟ್ಟುತ್ತಾರೆಂದು ಗರುಡ ಪುರಾಣದಲ್ಲಿ ಹೇಳಿಲ್ಲವೆ ? ಆದ್ದರಿಂದ ಪಾಪ ಆ ಪ್ರಾಣಿಗೆ ತೊಂದರೆ ಕೊಡಬೇಡ" ಎಂದು ಹೇಳಿ ಕಣ್ಣುಮುಚ್ಚಿದರು. ಮರುಳ ಬಂದು ಮತ್ತೆ ಕೂತ. ದೊರೆಸಾನಿ ಮತ್ತೆ ಕನಸಿನಲ್ಲಿ ನಕ್ಕಳು.

" ಮಂಕಾ, ಇದೇನೊ ಈ ಏರೋಪ್ಲೇನು ಸುಖವಿಲ್ಲ"

" ಗಗನಸಖೀನ ಕರೀಲೇನೋ "

" ಅದಕ್ಕಲ್ಲ—ನಮ್ಮ ಥರ್ಡ್ ಕ್ಲಾಸ್ ಡಬ್ಬಿವಳಗಿನ ಪ್ರಯಾಣದ ಮಜ ಇಲ್ಲಿಲ್ಲ. ರಾತ್ರಿ ಪ್ರಯಾಣ ನಮ್ಮೂರಿಂದ ಅರಸೀಕೆರೆಗೆ ಹೊರಟಾಗ ಮಧ್ಯ ತುಮಕೂರು ಸಂತೆ—ಬಾಣಸಂದ್ರ ಸಂತೆ—ಸೇರಿದಾಗ ಆಹಹ ಆ ನೂಕು ನುಗ್ಗಲು—ಎಲೆ ಅಡಿಕೆ ಸರಿಯಯ್ಯೋ—ಚರ್ಬೊಳೋ—ಅಯ್ಯಯ್ಯೋ ಮೇಲೇ ಕುಂತ್ಯಲ್ಲೋ... ರೀ ಇದೇನ್ರಿ ನಿಮ್ಮ ನಿದ್ರೆ ಜೊತೆ ಬಾಯಿ ಜೊಲ್ಲನ್ನೂ ಹೆಗಲ ಮೇಲೆ ಸುರಸ್ತೀರಲ್ರೀ... ಯುಮ್ಮೋ ಮಗ ಹೊರ್ಕಡಿ ಹೋಗ್ತೈತೆ ಕರ್ಕೋಳವ್ವೋ....ಇತ್ಯಾದಿ ಇತ್ಯಾದಿ ನಮ್ಮ ಜನದ ಒಂದು ಮಟ್ಟ—ಒಂದು ಮಾರ್ಗ—ಒಂದು ಸಹಬಾಳ್ವೆ ಇಲ್ಲಿ ಇಲ್ವಲ್ಲೋ.... ಗಲಾಟೆಯೇ ಇಲ್ಲದ ಮೌನವಾದ ಮುಸಂಡಿಗಳ ಜೊತೆ ನನಗೆ ಪ್ರಯಾಣ ಹಿಡಿಸೋಲ್ವಪ್ಪ—ಇಂಗ್ಲೆಂಡಿನೊಳಗೂ ಇಂಥುವೇ ಪ್ರಾಣಿಗಳು ಅಂತ ಆದರೆ ನಾನು ಲೈಫ್ ಬೆಲ್ಟ್ ಹಾಕ್ಕೊಂಡು ಅರಬ್ಬಿಸಮುದ್ರದಲ್ಲೇ ಹಾರಿ ವಾಪಸ್ಸು ನನ್ನ ಊರು ಸೇರುವೆ "—ಎಂದು ಮರುಳ ಕಳಕಳಿಯಿಂದ ಅತ್ತ. ಮಂಕ ತಲೆ ಎತ್ತಿ ನೋಡಿದ, ಕೈಗೆ ನಿಲುಕುವಂತೆ ಮೂರು ಸ್ವಿಚ್ಚುಗಳಿದ್ದವು. ದೀಪ ಹತ್ತುತದೆಯೇನೋ ಎಂದು ಕೊಂಡು ಒಂದನ್ನು ಒತ್ತಿದ. ಗಗನಸಖಿ ಬಂದಳು—" you wanted me do you ? "—ಎಂದು ವಿಚಾರಿಸಿದಳು. ಅವಳನ್ನು ನೋಡುತ್ತಲೇ ಮಂಕ .. " This ಮರುಳ ಕ್ರೈಯಿಂಗ್... give some Drinks " ಎಂದು ಶಿಫಾರ್ಸು ಮಾಡಿದ. ಗಗನಸಖಿ ಮಿರಾಂಡಾಗೆ ಮೊದಲೇ ಈ ವಿಚಿತ್ರ ಪ್ರಯಾಣಿಕರ ವಿಷಯ ಸಾಕಷ್ಟು ಗೊತ್ತಿತ್ತು. ಆಕೆ ಮರುಳನ ಅಳು ಕಂಡು ನಕ್ಕಳು. ಮಂಕನ ಮಾತಿಗೆ ಅಳಬೇಕೋ ನಗಬೇಕೋ ಗೊತ್ತಾಗಲಿಲ್ಲ.

"No Drinks at this hour please—please go to sleep...."—ಎಂದು ತಲೆದಿಂಬು ಸರಿಪಡಿಸಿ ತುಂಬಾ ಹೊಚ್ಚಿ ಹೊರಟು ಹೋದಳು.

ಈ ನಡುವೆ ಮುಡೆಯನಿಗೆ ಮಹಾ ಬೇಸರ ಬಂದು ತನ್ನ ಗಮಕ ವಿದ್ಯೆಗೆ ಇದೇ ಸೊಗಸಾದ ಸಮಯವೆಂದು ತಿಳಿದಿರಬೇಕು ಆತ. ತೀರ ಗಟ್ಟಿಯಾಗಿ ಅಲ್ಲ ದಿದ್ದರೂ ಸಾಕಷ್ಟು ಕೇಳುವ ಗಂಟಲಲ್ಲಿ "ಹಾಯ ಹರಿಗೋಲಾದೆ—ರಾಯಭೇರಿಗೆ ಯಾದೆ—ನೀನಾರಿಗಾದೆಯೋ ಎಲೆ ಮಾನವಾ"—ಎಂದು 'ಇಟ್ಟರೇ ಸಗಣಿಯಾದೆ ತಟ್ಟಿದರೆ ಕುರುಳಾದೆ' ಪದ್ಯವನ್ನು ಹೇಳತೊಡಗಿದ. ಇದರಿಂದ ಗುರುಗಳಿಗೆ ಈ ಮುಡೆಯನಿಗೆ ಎರಡು ಮುಡಗಲೇ ಎಂಬುವ ಕೋಪ ಬಂತು. ಎದ್ದು ಬರಲು ದೊರೆಸಾನಿಯ ಕೈ ಅಡ್ಡವಿತ್ತು. ಆಕೆಗೆ ಎಚ್ಚರವಾದರೆ ತಿಗಣೆ ಜನ್ಮ ಗರುಡಪುರಾಣ— ಹಾಗೇ ಇದ್ದಲ್ಲಿಂದಲೇ "ಏ ಮುಡೆಯಾ, ಸುಮ್ನೆ ಮಲ್ಕೊಳ್ಳೋ—ಹಾಗೆಲ್ಲಾ ಹಾಡ ಬೇಡ. ಥರ್ಡ್ ಕ್ಲಾಸ್ ಡಬ್ಬಿಯಲ್ಲಿ ಹಿಂದೆ ಹಾಡಿ ಕಾಸು ಬೇಡುತ್ತಿದ್ದೆಯಲ್ಲಾ, ಹಾಗೇ ಇಲ್ಲಿ ಪೆನ್ನಿ ಬೇಡಬೇಕೆಂದು ಹಾಡಿಗೆ ಸುರುಹಚ್ಚಿದೇನು?....ಹಿಂಗೇ ಮುಂದೆ ಹಾಡಿದರೆ ಲೈಫ ಬೆಲ್ಟು ಬಿಗಿದು ಅರಬ್ಬಿ ಸಮುದ್ರದಲ್ಲಿ ಹಾಕ್ಯಾರು ಹುಶಾರ್—ಪರಮ ಹುಶಾರ್...." ಎಂದು ಗದರಿಸಿದರು. "ಥೂ ದೇವರ ಧ್ಯಾನಕ್ಕೊ ಎಂಥಾ ಅಡ್ಡಿ ಈ ವಿಮಾನದಲ್ಲಿ" ಎಂದು ಶಪಿಸಿ ಮುಸುಗು ಹಾಕಿದ ಮುಡೆಯ.

ಮೌನ. ಏಕ್‌ದಂ ಇಡೀ ವಿಮಾನದಲ್ಲಿ ಸದ್ದೇ ಅಡಗಿ ಹೋಗಿಬಿಡ್ತು. ಬರೀ ನಾಲ್ಕು ಎಂಜಿನ್ನಿನ ಭೋರೆಂಬ ಸದ್ದೇ ಸದ್ದು.

........ಹಾಗೇ ಎಲ್ಲರಿಗೂ ನಿದ್ರೆ ಹತ್ತಿಬಿಟ್ಟಿತು.

* * * *

ಮತ್ತೆ ಕಣ್ಣುಜ್ಜಿಕೊಂಡು ಸುತ್ತಲೂ ನೋಡಿದಾಗ ಬೆಳಗಿನ ಜಾವದ ನಸು ಬೆಳಕು ಮೂಡುತ್ತಿತ್ತು. ಹಕ್ಕಿಗಳ ಚಿಲಿಪಿಲಿ ಇಲ್ಲ—ಕೋಳಿ ಕೊಕ್ಕೋ ಅನ್ನಲಿಲ್ಲ— ದನಕರುಗಳು ಅಂಬಾ ಎನ್ನಲಿಲ್ಲ—ಆದರೂ ಬೆಳಗಾಯಿತಲ್ಲಾ ಎಂಬ ಅಚ್ಚರಿಯಿಂದ ಸುತ್ತಲೂ ನೋಡಿ "ಎದುರು ಮನೆ ಮುದುಕಿ ಕೋಳಿ ನಮ್ಮೂರಲ್ಲಿ ಕೂಗಿ ದರೂ ಅಂತರಿಕ್ಷದಲ್ಲೂ ಬೆಳಗಾದದ್ದು ಪರಮಾಶ್ಚರ್ಯ" ಎಂದುಕೊಂಡು ಪವಾಡ ವನ್ನು ಕಂಡವನಂತೆ ಕಣ್ಣುಕಣ್ಣು ಬಿಟ್ಟರು ಗಾಂಪರೊಡೆಯರು.

ಸಹ ಪ್ರಯಾಣಿಕರು ಒಬ್ಬೊಬ್ಬರಾಗಿ ಎದ್ದರು. ಬಾತ್ ರೂಮಿಗೆ ಹೋಗಿ ಹೋಗಿ ಬಂದರು. ಮುತ್ತಾಳನೂ ಹೋದ. ಆ ಕನ್ನಡಿ—ಬಿಸಿನೀರಿನ ನಲ್ಲಿ— ತಣ್ಣೀರಿನ ಕಾರಂಜಿ—ಕನ್ನಡಿ ಪಕ್ಕದಲ್ಲಿ ಸಾಲಾಗಿದ್ದ ಸೀಸೆಗಳಲ್ಲಿ ಇಡ್ಯೂಕುಲಾನ್- ಷೇವಿಂಗ್ ಕ್ರೀಂ—ಆಫ್ಟರ್ ಷೇವಿಂಗ್ ಕ್ರೀಂ—ಬಾಯಿ ಮುಕ್ಕಳಿಸುವ ಮೌತ್ ವಾಷ್—ಟಿಬಾಲ್—ಹಲ್ಲುಪುಡಿ—ಸೋಪು-ಇತ್ಯಾದಿ, ಇತ್ಯಾದಿ ವಿವಿಧ ಸೌಂದರ್ಯ ಪರಿಕರಣಗಳು ಇದ್ದವು. ಕಾಗದದ ಲೋಟಾದಲ್ಲಿ ನೀರು ಕುಡಿಯುವ ಸಾಧನ— ಇದೆಲ್ಲವನ್ನೂ ಕಂಡು ದಂಗು ಬಡಿದು ನಿಂತ.

ತನ್ನ ಜೀವಿತದಲ್ಲೇ ಈಸಾಟಿ ಬರೀ ಬಚ್ಚಲು ಮನೆ ಬಾಬತ್ತು ವಿವಿಧ ಹಲ್ಲು ಪುಡಿ ಗಂಟಲ ಮುಲಾಮು ಕಂಡಿರಲಿಲ್ಲ. ಹೊಗೆ ಬಡಿದ ಬಚ್ಚಲುಮನೆಯಲ್ಲಿ ಅರೆಬರೆ ಕಾದ ನೀರಿನಲ್ಲಿ ಇಜ್ಜಲುಪುಡಿ ತಿಕ್ಕಿ—ನ್ಯೆಗೆ ಹೆಸರ್ಹಿಟ್ಟು ಹಚ್ಚಿ ಸ್ನಾನ ಮುಗಿಸುವ ಈ ಗಾಂಪರ ಶಿಷ್ಯರಿಗೆ ಇವೆಲ್ಲಾ ನೆಜ್ಜೆರೊಟ್ಟಿ ತಿನ್ನುವವನಿಗೆ ಮಂಡಿಗೆ ಮಾಡಿ ಬಡಿಸಿದ ಹಾಗಾಯ್ತು. ಅಲ್ಲಿದ್ದ ಎಲ್ಲವನ್ನೂ ಕೊಂಚ ಕೊಂಚ ಸುರಿಸಿ ಕೊಂಡು ಬಾಯಿ ಮುಕ್ಕಳಿಸಿ ಚೆನ್ನಾಗಿ ಮುಖ ತೊಳೆದು ಅಲ್ಲೇ ಇದ್ದ ಟೌಲಿನಲ್ಲಿ ಒರಸಿಕೊಂಡು ಕನ್ನಡಿಯಲ್ಲಿ ನೋಡಿಕೊಂಡು "Thank you" ಎಂದು ಹೇಳಿ ಕೊಂಡು ಹೊರಬಿದ್ದ. ದೊರೆಸಾನಿ ಗುರುಗಳು ಏನನ್ನೋ ಹರಟುತ್ತಿದ್ದರು. ಗುರು ಶಿಷ್ಯರೆಲ್ಲಾ ಪ್ರಾತರ್ವಿಧಿಗಳನ್ನು ಪ್ರಶಸ್ತವಾಗಿ ಮುಗಿಸಿದರು.

ಆಗಲೇ ತಟ್ಟೆಗಳಲ್ಲಿ ಬೆಳಗಿನ ಉಪಹಾರ (Break fast) ಅಣಿಮಾಡಿ ಕೊಂಡು ಎಲ್ಲರೆದಿರಿಗೂ ಇಡುತ್ತಿದ್ದಳು ಮಿರಾಂಡಾ. ಒಂದು ಸೇಬಿನ ಹಣ್ಣು—ನಾಲ್ಕು ಹೋಳು ಸುಟ್ಟ ಬ್ರೆಡ್ಡು—ಕಿತ್ತಲೇ ಹಣ್ಣಿನ ರಸ—ಕಾರ್ನ್ ಫ್ಲೇಕ್ಸ್—ಹಾಲು—ಬೆಣ್ಣೆ—ಜಾಮ್—ಬಿಸಿಬಿಸಿಯಾದ ಕಾಫಿ—ಇವಿಷ್ಟನ್ನೂ ಪ್ರತ್ಯೇಕವಾಗಿ ತೆಳು ಕಾಗದದಲ್ಲಿ ಸುತ್ತಿ—ತಿನ್ನಲು ಚಂಚ ಪೋರ್ಕು—ಚಾಕುಗಳಿಗೂ ಕಾಗದ ಸುತ್ತಿ ಶುಭ್ರವಾಗಿದ್ದ ಒಂದು ಕಾಗದದ ಕರ್ಚೀಫಿನೊಡನೆ ಬಹು ಆಕರ್ಷಕವಾಗಿ ಎದುರಿಗಿಟ್ಟಿದ್ದಳು.

ಎಲ್ಲದರ ಮೇಲೂ ಭಾರೀ ಮಿಸೆಯ ಗರುಡಮೂಗಿನ ಜರತಾರಿ ಅಂಗಿಯ ಗರಿ ಚುಚ್ಚಿದ ಪೇಟಕ್ಕೆ ಹಳೇಕಾಲದ ಸೇವಾಕಾಂಕ್ಷಿ ರಾಜನ ಸಂಕೇತದ ಚಿತ್ರವಿತ್ತು. AII ಅವರ ವೈಶಿಷ್ಟ್ಯ ಇದು ಎಂದು ಗುರುಗಳು ಶಿಷ್ಯರಿಗೆ ತೋರಿಸಿದರು.

ಎಲ್ಲರೂ ಪಗಡದಸ್ತಾಗಿ ಬೆಳಗಿನ ತಿಂಡಿ ತಿಂದರು. ದೊರೆಸಾನಿ ಗುರುಗಳಿಗೆ ಪೋರ್ಕು-ಚಾಕು ಹೇಗೆ ಬಳಸುವುದು ಎಂಬುದನ್ನು ಹೇಳಿಕೊಟ್ಟಳು. ಗುರುಗಳು Thank you ಅಂದರು. ಬಿಸಿಲು ಏರುತ್ತಿತ್ತು. ಪೂರ್ವ ದಿಗಂತದಲ್ಲಿ ಕೆಂಡ ಬಂಡೆಯಂತೆ ಎದ್ದುಬಂದ ಸೂರ್ಯಕಿರಣಗಳು ಕೆಲವೇ ನಿಮಿಷಗಳಲ್ಲಿ ಕಾದು ನಿಂತವು.

ಕೆಳಗೆ ನೋಡಿದಾಗ ತಳಾತಳ ಪಾತಾಳದಲ್ಲಿ ಊರು ಕಂಡಿತು. "Fasten your Belts—We are landing in Damascus shortly" ಎಂದು ಹೇಳುತ್ತಿದ್ದಂತೆಯೇ ಎಲ್ಲರೂ ಬೆಲ್ಟು ಬಿಗಿಯುತ್ತಿದ್ದಂತೇ ಅಯೋಧ್ಯಾರಾಣಿ-ಡೆಮಾಸ್ಕಸ್ಸಿನ ನೆಲ ಮುಟ್ಟಬಿಟ್ಟಿದ್ದಳು—ಧೂಳುಮಯದ ಅರಬರ ಊರು ದೂರ ದಲ್ಲಿ ಕಂಡಿತು.

—ದಾಶರಥಿ ದೀಕ್ಷಿತ್

ಈಗ ಪ್ರಕಟವಾಗಿವೆ! **ಹೊಸ ಕಾದಂಬರಿಗಳು!**

ತ. ರಾ. ಸು. ರವರ ಹೊಚ್ಚ ಹೊಸ ಕಾದಂಬರಿ

★ ಒಮ್ಮೆ ನಕ್ಕ ನಗು ★

ತ್ರಿವರ್ಣ ಚಿತ್ರ : : ೩೦೮ ಪುಟ : : ಮೂರು ರೂಪಾಯಿ

ತ. ರಾ. ಸು. ರವರ ಇತರ ಕಾದಂಬರಿಗಳೆಲ್ಲ ನಮ್ಮಲ್ಲಿವೆ.

ಅ. ನ. ಕೃ. ರವರ ಜನಪ್ರಿಯ ಕೃತಿ

ಸಾಹಿತ್ಯ ಮತ್ತು ಕಾಮಪ್ರಚೋದನೆ

ತ್ರಿವರ್ಣ ಮುಖಚಿತ್ರ : : ಎರಡೂವರೆ ರೂಪಾಯಿ

ಅ. ನ. ಕೃ. ರವರ ಬರಹಗಳು ನಮ್ಮಲ್ಲಿವೆ.

ಕೃಷ್ಣಮೂರ್ತಿ ಪುರಾಣಿಕರ ಹೊಸ ಸಂಗ್ರಹ

★ ವತ್ಸಲ ★

ತ್ರಿವರ್ಣ ಮುಖಚಿತ್ರ : : ಒಂದೂವರೆ ರೂಪಾಯಿ

ಕೃಷ್ಣಮೂರ್ತಿ ಪುರಾಣಿಕರ ಎಲ್ಲ ಕಾದಂಬರಿ ದೊರೆಯುತ್ತವೆ.

ನಮ್ಮ ಇತರ ಹೊಸ ಪ್ರಕಟನೆಗಳು

ನಾ ಸತ್ತಮೇಲೆ	೧—೫೦	ದೇವನ ಹೆಂಡ	೨—೫೦
ರೂಪಶ್ರೀ	೨—೦೦	ದೇವರ ಕೂಸು	೨—೦೦
ಕಬ್ಬಿಣದ ಕಾಗೆ	೨—೫೦	ಅಪಜಯ	೨—೦೦

ನಮ್ಮ ಪ್ರಕಟನೆ ಕರ್ನಾಟಕದ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿವೆ.

ಸುದರ್ಶನ ಪ್ರಕಾಶನ

ತಾರಾನಿವಾಸ : : ತಿಪಟೂರು

ಪುಸ್ತಕ ವ್ಯಾಪಾರಿಗಳು ಇಲ್ಲದ ಊರಿನವರು ನಮಗೆ ಬರೆಯಿರಿ.

Printed by B. S. Iyengar, Bangalore City.
lisher—B. N. Gupta. Editor—M. Sivaram.

Koravai